ವಿಜಯಪುರ | ಸಂಪುಟ 04 | ಸಂಚಿಕೆ 052 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com

RNI NO: KARKAN/2023/86203

ರವಿವಾರ, ಏಪ್ರಿಲ್, 12, 2026

"ಈಗ ಬ್ಲಾಕ್ ಮೇಲ್ ಪತ್ರಕರ್ತರ ಸಂಖ್ಯೆ ಹೆಚ್ಚಾಗಿದ್ದು ಇದು ಪತ್ರಿಕೋದ್ಯಮದ ಕಳಂಕ. ಇಂತವರಿಂದ ಪ್ರಾಮಾಣಿಕ, ಕಾರ್ಯನಿರತ ಪತ್ರಕರ್ತರ ಸಮೂಹಕ್ಕೆ ಮುಜುಗರ ಉಂಟಾಗುತ್ತಿದೆ. ವಸ್ತುನಿಷ್ಠ ವರದಿ, ಸಮಾಜಮುಖಿ ಬರವಣಿಗೆಯಿಂದ ಪತ್ರಕರ್ತರು ಬೆಳಗಬೇಕು."



■ ಶಿವಾನಂದ ತಗಡೂರ
ರಾಜ್ಯಾಧ್ಯಕ್ಷರು, ಕಾರ್ಯನಿರತ ಪತ್ರಕರ್ತರ ಸಂಘ, ಬೆಂಗಳೂರು

# ಪತ್ರಕರ್ತರು ವಸ್ತುನಿಷ್ಠವಾಗಿ, ಶೋಧನೆ ಮಾಡಿ ಬರೆಯಬೇಕು

## ಬೀದರ್ ನಲ್ಲಿ ಆಯೋಜಿಸಿದ್ದ 40 ನೇ ರಾಜ್ಯ ಪತ್ರಕರ್ತರ ಸಮ್ಮೇಳನ ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ

■ ಉದಯರಶ್ಮಿ ದಿನಪತ್ರಿಕೆ

ಬೀದರ್: ಗಾಂಧೀ ಮತ್ತು ಅಂಬೇಡ್ಕರ್ ಪತ್ರಕರ್ತರಾಗಿದ್ದರು. ಗಾಂಧೀಜಿಯವರ ಪತ್ರಿಕೆ ಸ್ವಾತಂತ್ರಕ್ಕೆ ಸಹಕಾರಿಯಾದರೆ, ಅಂಬೇಡ್ಕರ್ ಅವರು ಪತ್ರಿಕೆ ಧ್ವನಿ ಇಲ್ಲದವರ ಧ್ವನಿಯಾಗಿ ಕೆಲಸ ಮಾಡಿತು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಮರಿಸಿದರು.

ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಶನಿವಾರ ಬೀದರ್ ನಲ್ಲಿ ಆಯೋಜಿಸಿದ್ದ 40 ನೇ ರಾಜ್ಯ ಪತ್ರಕರ್ತರ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ಸಮಾಜದಲ್ಲಿ ಅನೇಕ ಜಾತಿ , ಧರ್ಮ ಭಾಷೆಗಳಿವೆ. ಇಂತಹ ವೈರುದ್ಧ ಸಮಾಜದಲ್ಲಿ ನಾವೆಲ್ಲ ಸಮಾನವಾಗಿ ಬದುಕಲು ಅಂಬೇಡ್ಕರ್ ಸಂವಿಧಾನ ರಚಿಸಿದ್ದಾರೆ. ಬಸವಣ್ಣನವರು ಕೂಡ ಈ ಉದ್ದೇಶದಿಂದ ಅನೇಕ ಕಾರ್ಯವನ್ನು ಮಾಡಿದ್ದರು. ಅದರೂ ಅಸಮಾನತೆ ನಿಂತಿಲ್ಲ. ಸಮಾಜದ ಕೆಲವು ಪಟ್ಟಭದ್ರಹಿತಾಸಕ್ತಿಗಳು ಇದನ್ನು ಮುಂದುವರೆಸಲು ಕಾಯುತ್ತಿದ್ದಾರೆ. ಅದನ್ನು ನಾವೆಲ್ಲ ಹೊಗಲಾಡಿಸಬೇಕು ಎಂದರು.

ಬಸವಣ್ಣ ಕರ್ಮ ಸಿದ್ಧಾಂತವನ್ನು ತಿರಸ್ಕರಿಸಿದ್ದರು. ಆದರೆ ಈಗ

### ನಮ್ಮ ಸರ್ಕಾರದ ಪರವಾಗಿ ಬರೆಯಿರಿ ಎಂದು ಯಾರನ್ನೂ ಕೇಳಿಲ್ಲ



ಕೆಲವು ಒಳ್ಳೆ ಪತ್ರಕರ್ತರೂ ಇದ್ದಾರೆ. ಆದರೆ ಬಹಳಷ್ಟು ಮಾಧ್ಯಮ ಸಂಸ್ಥೆಗಳು ಕಾರ್ಪೋರೇಟ್ ಹಿಡಿತಕ್ಕೆ ಒಳಪಟ್ಟಿವೆ. ಪತ್ರಕರ್ತರು ಸತ್ಯ ಬರೆದರೂ ಕೆಲವೊಮ್ಮೆ ಸಂಪಾದಕರುಗಳು ಮಾಲೀಕರ ಒತ್ತಡಕ್ಕೆ ಮಣಿದು ಬದಲಾಯಿಸಿ ಬಿಡುತ್ತಾರೆ. ನಾನು ಮಂತ್ರಿಯಾಗಿ 40 ವರ್ಷ ಆಯ್ತು. ನಮ್ಮ ಸರ್ಕಾರದ ಪರವಾಗಿ ಬರೆಯಿರಿ ಎಂದು ಇವತ್ತಿನವರೆಗೂ ನಾನು ಯಾರನ್ನೂ ಕೇಳಿಲ್ಲ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.



ಈಗಲು ಕೂಡ ಕೆಲವು ಮನುವಾದಿಗಳು ಕರ್ಮ ಸಿದ್ಧಾಂತವನ್ನು ಹುಟ್ಟು ಹಾಕುತ್ತಿದ್ದಾರೆ. ಅದನ್ನು ಕೆಲವು ಪಟ್ಟಭದ್ರ ಹಿತಾಸಕ್ತಿಯವರು ಬಲಗೊಳಿಸುತ್ತಿದ್ದಾರೆ. ಸಮ ಸಮಾಜ ನಿರ್ಮಾಣವಾದರೆ ಶೋಷಣೆ ನಿಂತು ಹೋಗುತ್ತದೆ ಹಾಗಾಗಿ ಶೋಷಣೆ ಮಾಡುವವರು ಸಮ ಸಮಾಜ ನಿರ್ಮಾಣ ಮಾಡಲು ಬಿಡದೆ ಅದನ್ನು ಇನ್ನಷ್ಟು ಗಟ್ಟಿ ಮಾಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಸುದ್ದಿ ಮಾಧ್ಯಮಗಳು ಕಾರ್ಯ ನಿರ್ವಹಿಸಬೇಕು. ಹಾಗಾಗಿ ಪತ್ರಕರ್ತರು ಸಾರ್ವಜನಿಕರಿಗೆ ಕೇವಲ ವಿಷಯ ತಿಳಿಸಿದರೆ ಸಾಕಾಗದು, ವೃತ್ತಿಯಲ್ಲಿ ಸಮಾಜ ಸುಧಾರಣೆಯನ್ನು ಮಾಡುವ ಉದ್ದೇಶವನ್ನು ಹೊಂದಿರಬೇಕು ಎಂದರು.

ಅದನ್ನು ಹೆಚ್ಚಾಗಿ ಶಿಕ್ಷಣವಂತರೆ ಪಾಲಿಸುತ್ತಿದ್ದಾರೆ. ಇದಕ್ಕೆ ಕಾರಣ ನಮ್ಮ ಶಿಕ್ಷಣದಲ್ಲಿ ಸಿದ್ಧಾಂತ ಮತ್ತು ವೈಚಾರಿಕತೆ ಇಲ್ಲದಂತಾಗಿರುವುದು.

ಯಾವ ದೇವರೂ ಯಾರನ್ನೂ ಕೂಡ ಅವಿದ್ಯಾವಂತನಾಗು ಅಂತಾಗಲೀ, ಕೆಳ ಜಾತಿಯಲ್ಲೇ ಹುಟ್ಟು ಎಂದು ಬಯಸುವುದಿಲ್ಲ.

ಈ ಅರಿವನ್ನು ಜನರಲ್ಲಿ ಹೆಚ್ಚಿಸುವ ಕೆಲಸ ಪತ್ರಕರ್ತರಿಂದ ಆಗಬೇಕು. ಪತ್ರಕರ್ತರು ಕೇವಲ ಮಾಹಿತಿ ಕೊಡುವವರಾಗದೆ, ಸಮಾಜ ಸುಧಾರಣೆಗೂ ಒತ್ತು ನೀಡಬೇಕು ಎಂದು ಸಿಎಂ ಹೇಳಿದರು.

ಬೀದರ್ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ್ ಖಂಡ್ರೆ, ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು, ಸಚಿವ ರಹೀಂ ಖಾನ್ ಮಾತನಾಡಿದರು.

ಸಚಿವರುಗಳಾದ ಶರಣ ಪ್ರಕಾಶ್ ಪಾಟೀಲ್, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್, ಜಿಲ್ಲಾಧ್ಯಕ್ಷರಾದ ಆನಂದ್ ದೇವಪ್ಪ, ಹಿರಿಯ ಸಂಪಾದಕ ವಿಶ್ವೇಶ್ವರ ಭಟ್, ಸಂಸದರಾದ ಸಾಗರ್ ಖಂಡ್ರೆ, ಮಾಜಿ ಸಚಿವರಾದ ರಾಜಶೇಖರ್ ಪಾಟೀಲ್, ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಸೋಮಣ್ಣ ಬೇವಿನಮರದ್ , ಹಾರಕುಡ ಹಿರೇಮಠ ಸಂಸ್ಥಾನದ ಡಾ.ಚನ್ನವೀರ ಶಿವಾಚಾರ್ಯರು, ಬಸವಕಲ್ಯಾಣ ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ಡಾ.ಬಸವಲಿಂಗ ಪಟ್ಟದೇವರು ಇವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪತ್ರಕರ್ತರ ಸಂಘದ ರಾಜ್ಯ ಮತ್ತು ಜಿಲ್ಲಾ ಪದಾಧಿಕಾರಿಗಳು ಇದ್ದರು.

### ಪತ್ರಕರ್ತರಿಗೆ ಉಚಿತ ಬಸ್ ಪಾಸ್ ನಿಯಮ ಸಡಿಲಿಕೆ

ಬೀದರ್: ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ನೀಡಲಾಗಿದ್ದು, ಇದರ ನಿಯಮಗಳಲ್ಲಿ ತೊಂದರೆ ಇದ್ದರೆ ಕೂಡಲೇ ಬಗೆ ಹರಿಸಲಾಗುತ್ತದೆ ಹಾಗೂ ಪತ್ರಕರ್ತರ ಕುಟುಂಬಕ್ಕೆ ಆರೋಗ್ಯ ವಿಮಾವನ್ನು ಜಾರಿ ಮಾಡುವ ಕುರಿತು ಚಿಂತಿಸಲಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.


### ಊಹೆ ಮೇಲಿನ ಬರವಣಿಗೆ ಬಹಳ ಅಪಾಯಕಾರಿ



ಇಂದಿನ ವಿದ್ಯಮಾನದಲ್ಲಿ ಸುದ್ದಿ ಮಾಧ್ಯಮಗಳು ಕಾರ್ಪೋರೇಟ್ ಕಂಪನಿಗಳ ಕೈಯಲ್ಲಿದೆ. ಅವರು ಹೇಳಿದಂತೆ ಪತ್ರಕರ್ತರು ಕೇಳುವಂತಾಗಿದೆ. ಹಾಗಾಗಿ ಪತ್ರಕರ್ತರು ಬರೆಯುವಾಗ ವಸ್ತುನಿಷ್ಠವಾಗಿ, ಶೋಧನೆ ಮಾಡಿ ಬರೆಯಿರಿ. ಊಹೆ ಮೇಲೆ ಬರೆಯಬೇಡಿ ಅದು ಬಹಳ ಅಪಾಯಕಾರಿ. ಕ್ಷುಲಕ ವಿಚಾರಗಳನ್ನು ವೈಭವೀಕರಿಸಬೇಡಿ, ಇದರಿಂದ ವ್ಯಕ್ತಿಯ ಮೇಲೆ ಆತನ ಬದುಕಿನ ಮೇಲೆ ಪರಿಣಾಮ ಬೀರುತ್ತದೆ. ನೀವು ಬರೆಯುವ ಸುದ್ದಿಗಳು ಸಮಾಜಕ್ಕೆ, ರಾಜ್ಯ ರಾಷ್ಟ್ರಕ್ಕೆ ಉಪಯೋಗವಾಗುವಂತೆ ಇರಬೇಕು ಎಂದು ಮುಖ್ಯಮಂತ್ರಿಗಳು ಕಿವಿಮಾತು ಹೇಳಿದರು.

# ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆಯಲ್ಲಿ ಗೊಂದಲ

■ ಉದಯ ರಶ್ಮಿ ದಿನಪತ್ರಿಕೆ



### ವೇಳಾಪಟ್ಟಿ ಪ್ರಕಟಣೆ ಇಲ್ಲದೆ ನಾಮಪತ್ರ ಸ್ವೀಕಾರ | ಶಿಕ್ಷಕರ ಅಸಮಾಧಾನ

ಅಥಣಿ: ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆಗೆ ಸಂಬಂಧಿಸಿದಂತೆ ಗೊಂದಲದ ವಾತಾವರಣ ನಿರ್ಮಾಣವಾಗಿದೆ ಎಂದು ಶಿಕ್ಷಕ ಸಂಗಮೇಶ ಹಚಡದ ಹೇಳಿದರು.

ಅಥಣಿ ಪಟ್ಟಣದಲ್ಲಿ ಮಾತನಾಡಿದ ಅವರು, ಚುನಾವಣೆಗೆ ನಾಮಪತ್ರ ಸಲ್ಲಿಸಲು ಇಂದು ಮತ್ತು ನಾಳೆ ಮಾತ್ರ ಅವಕಾಶ ನೀಡಲಾಗಿದೆ. ಆದರೆ, ಇದುವರೆಗೆ ಚುನಾವಣಾ ವೇಳಾಪಟ್ಟಿ, ಚುನಾವಣಾ ನಡೆಯುವ ಸ್ಥಳ ಹಾಗೂ ಸಂಬಂಧಿತ ಕಚೇರಿಗಳ ಕುರಿತು ಯಾವುದೇ ಅಧಿಕೃತ ಪ್ರಕಟಣೆ ನೀಡಲಾಗಿಲ್ಲ ಎಂಬುದು ಶಿಕ್ಷಕರ ಅಸಮಾಧಾನಕ್ಕೆ ಕಾರಣವಾಗಿದೆ.

ಚುನಾವಣಾ ಪ್ರಕ್ರಿಯೆಯ ಪಾರದರ್ಶಕತೆಗೆ ಸಂಬಂಧಿಸಿದಂತೆ ಪ್ರಶ್ನೆಗಳು ಉದ್ಭವವಾಗಿವೆ. ಹಲವಾರು ಶಿಕ್ಷಕರು ಈ ಕ್ರಮವನ್ನು ಪ್ರಶ್ನಿಸಿ, ಸಮರ್ಪಕ ಮಾಹಿತಿ ನೀಡದೇ ನಾಮಪತ್ರ ಸ್ವೀಕಾರ ಪ್ರಾರಂಭಿಸಿರುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

ಶಿಕ್ಷಕರ ಸಂಘದ ಚುನಾವಣೆಯು ಪ್ರಜಾಸತ್ತಾತ್ಮಕ ವಿಧಾನದಲ್ಲಿ, ಸ್ಪಷ್ಟ ಮಾರ್ಗಸೂಚಿಗಳೊಂದಿಗೆ ನಡೆಯಬೇಕು ಎಂಬುದು ಶಿಕ್ಷಕರ ಒತ್ತಾಯವಾಗಿದೆ. ತಕ್ಷಣವೇ ಚುನಾವಣಾ ವೇಳಾಪಟ್ಟಿ, ಸ್ಥಳ ಮತ್ತು ಸಂಬಂಧಿತ ವಿವರಗಳನ್ನು ಪ್ರಕಟಿಸಬೇಕೆಂದು ಅವರು ಆಗ್ರಹಿಸಿದ್ದಾರೆ.

ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಸ್ಪಷ್ಟನೆ ನೀಡಬೇಕಿದ್ದು, ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಈ ವಿಷಯ ದೊಡ್ಡ ಮಟ್ಟದಲ್ಲಿ ಚರ್ಚೆಗೆ ಕಾರಣವಾಗುವ ಸಾಧ್ಯತೆ ಇದೆ ಎಂದು

ಶಿಕ್ಷಕರಾದ ಸಂಗಮೇಶ ಹಚಡದ, ಚನ್ನಬಸು ಮಗದುಮ, ಅಕ್ಬರ ಮುಜಾವರ ತಿಳಿಸಿದ್ದಾರೆ.

ಈ ವೇಳೆ ಶಿಕ್ಷಕರಾದ ಈಶ್ವರಪ್ಪ ಜಾಧವ,ಡಿ ಎಮ್ ಮೊಪಗಾರ ಸೇರಿದಂತೆ ಇನ್ನಿತರ ಶಿಕ್ಷಕರು ಉಪಸ್ಥಿತರಿದ್ದರು

# ವಾರ್ಡನ್ ಕಿರುಕುಳಕ್ಕೆ ಬೇಸತ್ತು ಹೆಡ್ ಕುಕ್ ಆತ್ಮಹತ್ಯೆ!

## ನಿವರಗಿಯ ಸರ್ಕಾರಿ ಹಾಸ್ಟೇಲ್‌ನಲ್ಲಿ ದಾರುಣ ಘಟನೆ | ಡೆತ್‌ನೋಟ್ ಬರೆದು ಸಾವಿಗೆ ಶರಣು

■ ಉದಯರಶ್ಮಿ ದಿನಪತ್ರಿಕೆ

ಚಡಚಣ: ತಾಲೂಕಿನ ನಿವರಗಿ ಗ್ರಾಮದ ಸಮಾಜ ಕಲ್ಯಾಣ ಇಲಾಖೆಯ ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯದಲ್ಲಿ ಹೆಡ್ ಕುಕ್ ಆಗಿ ಕೆಲಸ ಮಾಡುತ್ತಿದ್ದ ವ್ಯಕ್ತಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡ ಘಟನೆ ಬೆಳಕಿಗೆ ಬಂದಿದೆ.

ಈ ಪ್ರಕರಣಕ್ಕೆ ಸಂಬಂಧಿಸಿ ವಸತಿ ನಿಲಯದ ವಾರ್ಡನ್ ಮಲ್ಲಪ್ಪ ಎಸ್. ವಾಲೀಕಾರ ವಿರುದ್ಧ ಗಂಭೀರ ಆರೋಪಗಳು ಕೇಳಿಬಂದಿವೆ. ಈ ಸಂಬಂಧ ಹಾಸ್ಟೇಲ್ ವಾರ್ಡನ್ ವಿರುದ್ಧ ಚಡಚಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತರನ್ನು ಭಗವಾನಸಿಂಗ್ ಕಿಶನಸಿಂಗ್ ಪರದೇಶಿ (58) ಎಂದು ಗುರುತಿಸಲಾಗಿದೆ. ಇವರು ಸುಮಾರು 23 ವರ್ಷಗಳಿಂದ ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಹೆಡ್ ಕುಕ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಕುಟುಂಬದೊಂದಿಗೆ ನಿವರಗಿಯಲ್ಲಿ ವಾಸವಾಗಿದ್ದು, ಪತ್ನಿ ಅನಿತಾ ಹಾಗೂ ಮಗ ಕಿಶನಸಿಂಗ್ ಕೂಡ ಇದೇ ಹಾಸ್ಟೇಲ್‌ನಲ್ಲಿ ಗುತ್ತಿಗೆ ಆಧಾರದ ಮೇಲೆ ಅಡುಗೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು.

ಮೃತರ ಪತ್ನಿ ಅನಿತಾ ಪರದೇಶಿ ನೀಡಿದ ದೂರಿನ ಪ್ರಕಾರ,ಹಾಸ್ಟೇಲ್ ವಾರ್ಡನ್ ಮಲ್ಲಪ್ಪ ಎಸ್. ವಾಲೀಕಾರ ಕಳೆದ ಜನೇವರಿಯಲ್ಲಿ ಡೆಪ್ಯುಟೇಷನ್ ಮೇಲೆ ಲೋಣಿ ಬಿಕೆ ಗ್ರಾಮದಲ್ಲಿರುವ ಹಾಸ್ಟೆಲ್‌ಗೆ ವರ್ಗಾವಣೆಗೊಂಡು ಅಲ್ಲಿನ ವಾರ್ಡನ್ ಆದ ಶಿವಾನಂದ ಅಂಗಡಿ ಅವರು ನೀವರಗಿ ಹಾಸ್ಟೇಲ್‌ಗೆ ಬಂದಿದ್ದರು ಅವರು ಕೇವಲ ಸಹಿಮಾಡಿ ಹೊಗುತ್ತಿದ್ದು , ವಾರ್ಡನ್ ಮಲ್ಲಪ್ಪ ಎಸ್. ವಾಲೀಕಾರ ಅವರ ಮಾತಿನಂತೆ ನಡೆಯಿರಿ




ಎಂದು ನಮಗೆ ಆದೇಶಿಸಿದ್ದರು ಅದರಂತೆ ನಾವು ಹಾಸ್ಟೇಲ್ ವಾರ್ಡನ್ ಮಲ್ಲಪ್ಪ ಎಸ್. ವಾಲೀಕಾರ ಅವರ ಸೂಚನೆ ಪಾಲಿಸುತ್ತಿದ್ದೆವು, ಹಾಸ್ಟೇಲ್ ವಾರ್ಡನ್ ಮಲ್ಲಪ್ಪ ಎಸ್. ವಾಲೀಕಾರ ಕಳೆದ ಒಂದು ವರ್ಷದಿಂದ ವಿವಿಧ ಕಾರಣಗಳಿಗೆ ನಿರಂತರ ಒತ್ತಡ ಹಾಗೂ ಕಿರುಕುಳ ನೀಡುತ್ತಿದ್ದರು ಎಂದು ಆರೋಪಿಸಲಾಗಿದೆ. ಆಹಾರ ಸಾಮಗ್ರಿ, ದಿನಸಿ ಖರೀದಿ, ವಿದ್ಯಾರ್ಥಿಗಳ ಕೂದಲು ಕಟಿಂಗ್ ವೆಚ್ಚ ಸೇರಿದಂತೆ ಹಲವು ವಿಷಯಗಳಲ್ಲಿ ಅನಗತ್ಯ ಒತ್ತಡ ಹಾಕುತ್ತಿದ್ದರು ಎಂದು ದೂರಿನಲ್ಲಿ ಹೇಳಲಾಗಿದೆ.

ಇದಲ್ಲದೆ, "ನೀವು ನನ್ನ ಮಾತಿನಂತೆ ಕೆಲಸ ಮಾಡದಿದ್ದರೆ ಕೆಲಸ ಬಿಟ್ಟು ಹೋಗಿ, ಎಲ್ಲಿ ಆದ–'ರು ಹೋಗಿ ಉರುಲು ಹಾಕಿಕೊಂಡು ಸಾಯಿರಿ ಮಕ್ಕಳ್ಯಾ" ಎಂಬ ರೀತಿಯ ಅವಾಚ್ಯ ಶಬ್ದಗಳನ್ನು ಬಳಸುತ್ತಿದ್ದು, ಅವಮಾನಕಾರಿ ಮತ್ತು ಪ್ರಚೋದನಾತ್ಮಕ ಮಾತುಗಳನ್ನು ಆಡುತ್ತಿದ್ದರೆಂದು ಆರೋಪಿಸಲಾಗಿದೆ.

ಈ ಮಾತುಗಳಿಂದ ಮಾನಸಿಕವಾಗಿ ನೊಂದ ಭಗವಾನಸಿಂಗ್ ಅವರು ಜೀವನದಲ್ಲಿ ಜಿಗುಪ್ಸೆಗೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪತ್ನಿ ದೂರಿನಲ್ಲಿ ತಿಳಿಸಿದ್ದಾರೆ.

ಏಪ್ರಿಲ್ 8ರಂದು ನಡೆದ ಘಟನೆಯಲ್ಲಿ ಕೂದಲು ಕತ್ತರಿಸುವ ವೆಚ್ಚದ ವಿಚಾರವಾಗಿ ವಾರ್ಡನ್ ಮತ್ತು ಮೃತರ ನಡುವೆ ವಾಗ್ವಾದ ನಡೆದಿದ್ದು, ಅದರಿಂದ ಮಾನಸಿಕವಾಗಿ ಬೇಸರಗೊಂಡಿದ್ದ ಭಗವಾನಸಿಂಗ್ ಅವರು ಮರುದಿನ ಏಪ್ರಿಲ್ 9ರಂದು ಬೆಳಿಗ್ಗೆ ಸುಮಾರು 10 ಗಂಟೆಗೆ ಸಂಭವಿಸಿದ್ದು, ಹಾಸ್ಟೇಲ್‌ನಲ್ಲಿಯೇ ಫ್ಯಾನಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ತಿಳಿದುಬಂದಿದೆ.

ಸ್ಥಳದಲ್ಲಿ ಮೃತರು ತಮ್ಮ ಕಿಸೆಯಲ್ಲಿ ಬರೆದಿದ್ದ ಡೆತ್ ನೋಟ್ ಪತ್ತೆಯಾಗಿದ್ದು, ಅದರಲ್ಲಿ ವಾರ್ಡನ್ ಕಿರುಕುಳವೇ ಆತ್ಮಹತ್ಯೆಗೆ ಕಾರಣ ಎಂದು ಉಲ್ಲೇಖಿಸಿರುವುದಾಗಿ ಕುಟುಂಬದವರು ಹೇಳಿದ್ದಾರೆ.

ಈ ಘಟನೆ ಸ್ಥಳೀಯವಾಗಿ ತೀವ್ರ ಚರ್ಚೆಗೆ ಕಾರಣವಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಈ ಸಂಬಂಧ ಚಡಚಣ ಪೊಲೀಸ್ ಠಾಣೆಯಲ್ಲಿ ಗುನ್ನೆ ಸಂಖ್ಯೆ 50/2026 ಅಡಿಯಲ್ಲಿ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) 2023ರ ಕಲಂ 108 ಹಾಗೂ 352 ಅನ್ವಯ ಪ್ರಕರಣ ದಾಖಲಿಸಿಕೊಂಡು, ಪಿ.ಎಸ್.ಐ ಸೋಮೇಶ ಗೆಜ್ಜಿ ಅವರು ತನಿಖೆ ಮುಂದುವರೆಸಿದ್ದಾರೆ.

# ಬಿ.ಎಲ್.ಡಿ.ಇ ಸಂಸ್ಥೆಯಿಂದ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ನೆರವು

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಬಿ.ಎಲ್.ಡಿ.ಇ ಸಂಸ್ಥೆ ಜಿಲ್ಲೆಯ ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಲು ಸದಾ ನೆರವು ನೀಡುತ್ತ ಬಂದಿದೆ ಎಂದು ಬಿ.ಎಲ್.ಡಿ.ಇ ಸಂಸ್ಥೆಯ ನಿರ್ದೇಶಕ ಮತ್ತು ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಕುಲಪತಿ ಬಸನಗೌಡ ಎಂ. ಪಾಟೀಲ ಹೇಳಿದ್ದಾರೆ.

ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ ಕಲಾ ವಿಭಾಗದಲ್ಲಿ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದ ಎಸ್.ಎಸ್ ಪಿ.ಯು ಕಾಲೇಜಿನ ವಿದ್ಯಾರ್ಥಿನಿ ಸಾನಿಕಾ ಮೆಟಗಾರ, ತೃತೀಯ ಸ್ಥಾನ ಪಡೆದ ಅಕ್ಷತಾ ಚವ್ಹಾಣ ಮತ್ತು ಬರಡೋಲ ಸರಕಾರಿ ಪಿ.ಯು ಕಾಲೇಜಿನ ಲಕ್ಷ್ಮಿ ಶ್ರೀಕಾಂತ ನಂದೂರ ಹಾಗೂ ನಾಲ್ಕನೇ ಸ್ಥಾನ ಪಡೆದ ಎಸ್.ಎಸ್ ಪಿಯು ಕಾಲೇಜಿನ ವಿದ್ಯಾರ್ಥಿ ಯುವರಾಜ ಬಗಲಿ ಅವರನ್ನು ಸನ್ಮಾನಿಸಿ ಮತ್ತು ಆರ್ಥಿಕ ನೆರವು ನೀಡಿ ಅವರು ಮಾತನಾಡಿದರು.

ದ್ವಿತೀಯ ಪಿ.ಯು ಪರೀಕ್ಷೆಯಲ್ಲಿ ವಿಜಯಪುರ ಜಿಲ್ಲೆ 29ನೇ ಸ್ಥಾನದಲ್ಲಿತ್ತು ಈ ಹಿನ್ನಲೆಯಲ್ಲಿ ಬೋಧನೆ ಗುಣಮಟ್ಟ ಸುಧಾರಿಸಿ, ಪರೀಕ್ಷೆಗೆ ಸಾಕಷ್ಟು ಪೂರ್ವ ಸಿದ್ದತೆ ನಡೆಸುವಂತೆ ಸಚಿವ ಎಂ. ಬಿ. ಪಾಟೀಲ ಅವರು ಶಿಕ್ಷಣ ಇಲಾಖೆಗೆ ಸೂಚನೆ ನೀಡಿದ್ದರು. ಅದರಂತೆ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಮಂಡಳಿ ಅಧಿಕಾರಿಗಳು, ಶಿಕ್ಷಕರು ಸಾಕಷ್ಟು ತಯಾರಿ ನಡೆಸಿ, ವಿದ್ಯಾರ್ಥಿಗಳು ಮತ್ತು ಪೋಷಕರೊಂದಿಗೆ ಸಂವಾದ ನಡೆಸಿ ವಿದ್ಯಾರ್ಥಿಗಳಿಗೆ ಸೂಕ್ತ ತರಬೇತಿ ನೀಡಿದ್ದರು. ಇದರಿಂದಾಗಿ ವಿಜಯಪುರ ಜಿಲ್ಲೆ ಈ ಬಾರಿ ಪಲಿತಾಂಶದಲ್ಲಿ ನಾಲ್ಕನೇ ಸ್ಥಾನಕ್ಕೇರಿದೆ. ಅಲ್ಲದೇ, ನಾಲ್ಕು ಜನ ವಿದ್ಯಾರ್ಥಿಗಳು ರಾಜ್ಯ ಮಟ್ಟದಲ್ಲಿ ರ‍್ಯಾಂಕ್ ಪಡೆಯುವ ಮೂಲಕ ಬಸವ ನಾಡಿಗೆ ಕೀರ್ತಿ ತಂದಿದ್ದಾರೆ. ಇಂಥ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಚಿವ ಎಂ. ಬಿ. ಪಾಟೀಲ ಅವರು ಬಿ.ಎಲ್.ಡಿ.ಇ ಸಂಸ್ಥೆ ಮೂಲಕ ಈ ಹಿಂದಿನಿಂದಲೂ ಸಹಾಯ ಮಾಡುತ್ತ ಬಂದಿದ್ದಾರೆ. ಈ ವರೆಗೆ ನೀಟ್ ಪಾಸಾಗಿ ಸರಕಾರಿ ಕೋಟಾದಡಿ ಸೀಟು ಪಡೆದ ಸುಮಾರು 40 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವೈದ್ಯಕೀಯ ಶಿಕ್ಷಣಕ್ಕೆ ಆರ್ಥಿಕ ನೆರವು ನೀಡಿದ್ದಾರೆ ಎಂದು ಅವರು ತಿಳಿಸಿದರು.

ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಸಿ. ಕೆ. ಹೊಸಮನಿ ಮಾತನಾಡಿ, ಸಚಿವ ಎಂ. ಬಿ. ಪಾಟೀಲರ ಕಟ್ಟುನಿಟ್ಟಿನ ಸೂಚನೆ ಹಿನ್ನಲೆಯಲ್ಲಿ ಫಲಿತಾಂಶ ಸುಧಾರಣೆಗೆ ಇಲಾಖೆ ವತಿಯಿಂದ ಸಾಕಷ್ಟು ಸಿದ್ದತೆ ಮಾಡಲಾಗಿತ್ತು. ವಿದ್ಯಾರ್ಥಿಗಳಿಗೆ ಮಾದರಿ ಪ್ರಶ್ನೆ ಪತ್ರಿಕೆಗಳನ್ನು ನೀಡುವ ಮೂಲಕ ಎರಡು ಬಾರಿ ಪೂರ್ವ ಸಿದ್ದತೆ ಪರೀಕ್ಷೆ ನಡೆಸಲಾಗಿ–ತ್ತು. ಇದರ ಪರಿಣಾಮವಾಗಿ ಜಿಲ್ಲೆಯ ಫಲಿತಾಂಶ ಹೆಚ್ಚಾಗಿದ್ದು ನಾಲ್ಕು ವಿದ್ಯಾರ್ಥಿಗಳು ರಾಜ್ಯ ಮಟ್ಟದಲ್ಲಿ ರ‍್ಯಾಂಕ್ ಪಡೆದಿದ್ದಾರೆ ಎಂದು ಹೇಳಿದರು.

ಕಗ್ಗೋಡ ಸರಕಾರಿ ಪಿಯು ಕಾಲೇಜಿನ ಪ್ರಾಚಾರ್ಯ ಕೆ. ಎ. ಉಪ್ಪಾರ ಮಾತನಾಡಿ, ರಾಜ್ಯಕ್ಕೆ ರ‍್ಯಾಂಕ್ ಪಡೆದಿರುವ ನಾಲ್ಕೂ ವಿದ್ಯಾರ್ಥಿಗಳು ಗ್ರಾಮೀಣ ಭಾಗದವರಾಗಿದ್ದಾರೆ. ಈ ಪ್ರತಿಭಾವಂತ ವಿದ್ಯಾರ್ಥಿಗಳು ಜೀವನದಲ್ಲಿ ದೊಡ್ಡ ಗುರಿಯನ್ನು ಇಟ್ಟುಕೊಂಡು ಯು.ಪಿ.ಎಸ್.ಸಿ ಮತ್ತು ಕೆ.ಪಿ. ಎಸ್.ಸಿ ಸಿದ್ದತೆ ನಡೆಸಿ ಉನ್ನತ ಅಧಿಕಾರಿಗಳಾಗಬೇಕು ಎಂದು ಕಿವಿಮಾತು ಹೇಳಿದರು.

ಇದೇ ವೇಳೆ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಸಿ. ಕೆ. ಹೊಸಮನಿ ಅವರನ್ನು ಬಸನಗೌಡ ಎಂ. ಪಾಟೀಲ ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯ ರಜಿಸ್ಟ್ರಾರ್ ಡಾ. ಆರ್. ವಿ. ಕುಲಕರ್ಣಿ, ಬಿ. ಎಲ್.ಡಿ.ಇ ಸಂಸ್ಥೆಯ ಆಡಳಿತಾಧಿಕಾರಿಗಳಾದ ಐ. ಎಸ್. ಕಾಳಪ್ಪನವರ, ಎಸ್. ಎ. ಬಿರಾದಾರ(ಕನ್ನಾಳ), ಬರಡೋಲ ಸರಕಾರಿ ಪಿಯು ಕಾಲೇಜಿನ ಪ್ರಾಚಾರ್ಯ ಸುರೇಶ ನಾರಾಯಣಕರ, ಉಪನ್ಯಾಸಕ ಟಿ. ಎಂ. ಪವಾರ, ಸಂತೋಷ ಮಸಳಿ, ವಿದ್ಯಾರ್ಥಿಗಳ ಪೋಷಕರು ಮುಂತಾದವರು ಉಪಸ್ಥಿತರಿದ್ದರು.

ಸಂತೋಷ ಲೋಕುರಿ ಸ್ವಾಗತಿಸಿ, ಪರಿಚಯಿಸಿ, ವಂದಿಸಿದರು.



# ದ್ವಿತೀಯ ಪಿಯುಸಿ ಪರೀಕ್ಷೆ: ಶಾಹೀನ್ ಕಾಲೇಜು ಸಾಧನೆ

ಬೀದರ್:ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಫಲಿತಾಂಶ ಪಡೆಯುವ ಮೂಲಕ ಇಲ್ಲಿಯ ಶಾಹೀನ್ ಪದವಿಪೂರ್ವ ವಿಜ್ಞಾನ ಕಾಲೇಜು ಸಾಧನೆಗೈದಿದೆ. ಕಾಲೇಜಿನ 1,117 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಈ ಪೈಕಿ 439 ಅಗ್ರಶ್ರೇಣಿ, 632 ಪ್ರಥಮ ದರ್ಜೆ ಹಾಗೂ 6 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಕಾಲೇಜು ಒಟ್ಟಾರೆ ಫಲಿತಾಂಶ ಶೇ 96.41 ಆಗಿದೆ ಎಂದು ಶಾಹೀನ್ ಶಿಕ್ಷಣ ಸಂಸ್ಥೆಗಳ ಸಮೂಹದ ಅಧ್ಯಕ್ಷ ಡಾ. ಅಬ್ದುಲ್ ಖದೀರ್ ತಿಳಿಸಿದ್ದಾರೆ. ಸಾನಿಯಾ ಅಲಿಸಾಬ್ ಶೇ 98 ರಷ್ಟು ಅಂಕ ಗಳಿಸಿ ಕಾಲೇಜಿಗೆ ಟಾಪರ್ ಆಗಿ ಹೊರಹೊಮ್ಮಿದ್ದಾರೆ. ಯಾಸೀರ್ ಮುಲ್ಲಾ ಶೇ 97.33, ಉಮ್ಮೆಐಮನ್ ಮುಂದಾಸ್ ಶೇ 97, ಮೈನಾಕ್ ಕುಂದು ಶೇ 96.67, ನಂದಿನಿ ಶೇ 96.50, ಝೋಯಾ ಫಾತಿಮಾ ಶೇ 96.50, ಜ್ಯೋತ್ಸ್ನಾ ಜೆ.ಸಿ., ಭಿಮಾಶಂಕರ 96.33, ಝೀಶಾನ್ ಶೇ 96.17, ಅಬುಬಕರ್ ಅಬ್ದುಲ್ಲಾ ಶೇ 96.17 ರಷ್ಟು ಅಂಕ ಪಡೆದು ಸಾಧನೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ಉತ್ತಮ ಶೈಕ್ಷಣಿಕ ವಾತಾವರಣ, ಗುಣಮಟ್ಟದ ಸ್ಪರ್ಧಾತ್ಮಕ ಶಿಕ್ಷಣ, ಆಡಳಿತ ಮಂಡಳಿ, ಉಪನ್ಯಾಸಕರ ಮಾರ್ಗದರ್ಶನ ಹಾಗೂ ವಿದ್ಯಾರ್ಥಿಗಳ ಪರಿಶ್ರಮದಿಂದಾಗಿ ಕಾಲೇಜಿಗೆ ಅತ್ಯುತ್ತಮ ಫಲಿತಾಂಶ ದೊರೆತಿದೆ ಎಂದು ತಿಳಿಸಿದ್ದಾರೆ.



# ಪತ್ರಿಕಾ ಭವನದಲ್ಲಿ ಜರುಗಿದ ಸಮ್ಮೇಳನದ ಮಹಿಳಾ ಸಮಿತಿ ಸಭೆಮಹಿಳಾ ಪತ್ರಕರ್ತರ ಸ್ವಾಗತಕ್ಕೆ ಮೂರು ತಂಡಗಳ ರಚನೆ

ಬೀದರ್: ಏ. 11 ಹಾಗೂ 12 ರಂದು ನಡೆಯಲಿರುವ ಪತ್ರಕರ್ತರ ರಾಜ್ಯ ಸಮ್ಮೇಳನಕ್ಕೆ ವಿವಿಧೆಡೆಯಿಂದ ಬರುವ ಮಹಿಳಾ ಪತ್ರಕರ್ತರನ್ನು ಬಸ್, ರೈಲು ನಿಲ್ದಾಣ ಹಾಗೂ ವಿಮಾನ ನಿಲ್ದಾಣಗಳಿಂದ ಸ್ವಾಗತಿಸಿ, ವಸತಿ ಗೃಹಕ್ಕೆ ಕರೆದೊಯ್ಯಲು ಸಮ್ಮೇಳನದ ಮಹಿಳಾ ಸಮಿತಿ ಮೂರು ಪ್ರತ್ಯೇಕ ತಂಡ ರಚಿಸುವ ನಿರ್ಧಾರ ಕೈಗೊಂಡಿದೆ. ಬಸವಣ್ಣನವರ ನಾಡಿಗೆ ಆಗಮಿಸುವ ಪತ್ರಕರ್ತೆಯರಿಗೆ ಯಾವುದೇ ರೀತಿಯ ಅನಾನುಕೂಲವಾಗದಂತೆ ನೋಡಿಕೊಳ್ಳಲು ಸಂಘದ ಅಧ್ಯಕ್ಷ ಆನಂದ ದೇವಪ್ಪಾ ಅವರ ಮಾರ್ಗದರ್ಶನದಲ್ಲಿ ಮಹಿಳಾ ಸಮಿತಿ ನಿರ್ಧ–ರಿಸಿದೆ. ಈ ಹಿಂದೆ ಮಹಿಳಾ ಪತ್ರಕರ್ತೆಯರ ಸಂಖ್ಯೆ ಮಾಧ್ಯಮ ಲೋಕದಲ್ಲಿ ಕಡಿಮೆ ಇತ್ತು. ಇಂದು ಹತ್ತಾರು ಮಹಿಳೆಯರು ಕ್ರಿಯಾಶೀಲರಾಗಿ ಮಾಧ್ಯಮ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವುದನ್ನು ನೋಡಿ ಸಂತೋಷವಾಗಿದೆ. ಪತ್ರಕರ್ತರ ಸಂಘದ ಸದಸ್ಯರಲ್ಲದ ಕ್ರಿಯಾಶೀಲ ಮಹಿಳಾ ಪತ್ರಕರ್ತೆಯರು ಸಮ್ಮೇಳನಕ್ಕೆ ಕೈಜೋಡಿಸಿರುವುದು ಸಂತಸ ತಂದಿದೆ. ಎಂದು ಆನಂದ ದೇವಪ್ಪ ತಿಳಿಸಿದರು. ಇಂದು ನಡೆಯುವ ಬೈಕ್ ರ್ಯಾಲಿಯಲ್ಲಿ ಕೂಡಾ ನಗರದ ಮಹಿಳಾ ಪತ್ರಕರ್ತರು ಉತ್ಸಾಹದಿಂದ ಪಾಲ್ಗೊಳ್ಳಲಿದ್ದಾರೆ ಎಂದು ಅಪ್ಪಾರಾವ ಸೌದಿ ತಿಳಿಸಿದರು.

# ಬೀದರ್‌ನಲ್ಲಿ 40ನೇ ರಾಜ್ಯ ಸಮ್ಮೇಳನ ಆರಂಭರಾಜ್ಯಮಟ್ಟದ ಪ್ರಶಸ್ತಿ, ವಿಚಾರಗೋಷ್ಠಿಗಳ ವೈಭವ ಮಲ್ಲಪ್ಪ ಸಂಕೀನ್

ಯಾದಗಿರಿ: ರಾಜ್ಯದ ಪತ್ರಕರ್ತ ಸಮುದಾಯದ ಮಹತ್ವದ ಜಾತ್ರೆಯಾಗಿ ಪರಿಗಣಿಸಲ್ಪಡುವ 40ನೇ ರಾಜ್ಯಮಟ್ಟದ ಪತ್ರಕರ್ತರ ಸಮ್ಮೇಳನವು ಏಪ್ರಿಲ್ 11 ಮತ್ತು 12ರಂದು ಬೀದರ್‌ನಲ್ಲಿ ಭವ್ಯವಾಗಿ ಜರುಗಲಿದ್ದು, ಚಿಂತನೆ–ಮಂಥನ, ತಾಂತ್ರಿಕ ಚರ್ಚೆಗಳು ಹಾಗೂ ಸಾಧಕರಿಗೆ ಗೌರವ ಸಲ್ಲಿಸುವ ಕಾರ್ಯಕ್ರಮಗಳ ಮೂಲಕ ಗಮನ ಸೆಳೆಯುತ್ತಿದೆ.

ಈ ಕುರಿತು ಜಿಲ್ಲಾ ಪತ್ರಿಕಾ ಭವನದಲ್ಲಿ ಮಾಹಿತಿ ನೀಡಿದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಮಲ್ಲಪ್ಪ ಸಂಕೀನ್, ಸಮ್ಮೇಳನವು ಮಾಧ್ಯಮ ಕ್ಷೇತ್ರದ ಇಂದಿನ ಸವಾಲುಗಳು, ಭವಿಷ್ಯದ ದಿಕ್ಕುಗಳು ಹಾಗೂ ಸಮಾಜದ ಮೇಲಿನ ಹೊಣೆಗಾರಿಕೆಗಳ ಕುರಿತು ಸಮಗ್ರ ಚರ್ಚೆಗೆ ವೇದಿಕೆಯಾಗಲಿದೆ ಎಂದು ಹೇಳಿದರು.

ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲ್ಗೊಳ್ಳಲಿದ್ದು, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ವಸ್ತು ಪ್ರದರ್ಶನಕ್ಕೆ ಚಾಲನೆ ನೀಡಲಿದ್ದಾರೆ. ಧಾರ್ಮಿಕ ಹಾಗೂ ಚಿಂತನಾ ಕ್ಷೇತ್ರದ ಗಣ್ಯರು, ಹಿರಿಯ ಪತ್ರಕರ್ತರು ಹಾಗೂ ಸಂಘದ ಪದಾಧಿಕಾರಿಗಳು ಈ ವೇದಿಕೆಯನ್ನು ಮತ್ತಷ್ಟು ಶ್ರೀಮಂತಗೊಳಿಸಲಿದ್ದಾರೆ.

ಸಮ್ಮೇಳನದ ಅಂಗವಾಗಿ ನಗರದ ಪ್ರಮುಖ ವೃತ್ತದಿಂದ ಆರಂಭವಾಗುವ ಭವ್ಯ ಮೆರವಣಿಗೆ ಕಲಾತ್ಮಕ ಪ್ರದರ್ಶನಗಳೊಂದಿಗೆ ಗಮನ ಸೆಳೆಯಲಿದ್ದು, ಪತ್ರಕರ್ತರ ಏಕತೆ ಮತ್ತು ಸಂಸ್ಕೃತಿಯ ವೈವಿಧ್ಯತೆಯನ್ನು ಪ್ರತಿಬಿಂಬಿಸಲಿದೆ.

ಎರಡು ದಿನಗಳ ಸಮ್ಮೇಳನದಲ್ಲಿ ಗಾಂಧಿ ಮತ್ತು ಅಂಬೇಡ್ಕರ್ ಚಿಂತನೆಗಳು, ಕಲ್ಯಾಣ ಕರ್ನಾಟಕದ ಅಭಿವೃದ್ಧಿಯಲ್ಲಿ ಮಾಧ್ಯಮಗಳ ಪಾತ್ರ, ಗಡಿ ಸಮಸ್ಯೆಗಳು, ಮಾಧ್ಯಮ–ಉದ್ಯಮ ಸಂಬಂಧ, ಮಾಹಿತಿ ಹಕ್ಕು, ಹಾಗೂ ಆಧುನಿಕ ತಂತ್ರಜ್ಞಾನಗಳಾದ ಆರ್ಟಿಫಿಷಿಯಲ್ ಇಂಟಲಿಜೆನ್ಸ್ ಮತ್ತು ಡಿಜಿಟಲೀಕರಣದ ಪರಿಣಾಮಗಳ ಕುರಿತು ಗಂಭೀರ ವಿಚಾರಗೋಷ್ಠಿಗಳು ನಡೆಯಲಿವೆ.

ಈ ಚರ್ಚೆಗಳು ಕೇವಲ ವೃತ್ತಿಪರ ಬೆಳವಣಿಗೆಗೆ ಮಾತ್ರವಲ್ಲದೆ, ಸಮಾಜಮುಖಿ ಪತ್ರಿಕೋದ್ಯಮಕ್ಕೆ ದಿಕ್ಕು ತೋರಿಸುವಂತೆ ರೂಪಿಸಲಾಗಿದೆ ಎಂದು ಸಂಕೀನ್ ತಿಳಿಸಿದರು. ಸಮ್ಮೇಳನದ ಅಂತಿಮ ದಿನ ನಡೆಯುವ ಸಮಾರೋಪ ಸಮಾರಂಭದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಆಯ್ಕೆಯಾದ ಪತ್ರಕರ್ತರಿಗೆ ಪ್ರತಿಷ್ಠಿತ ರಾಜ್ಯಮಟ್ಟದ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು. ಇದು ಪತ್ರಕರ್ತರ ಸೇವೆಗೆ ಸಲ್ಲುವ ಗೌರವದ ಸಂಕೇತವಾಗಲಿದೆ.

ಜಿಲ್ಲೆಯಿಂದ ನೂರಕ್ಕೂ ಅಧಿಕ ಪತ್ರಕರ್ತರು ಭಾಗವಹಿಸುವ ನಿರೀಕ್ಷೆಯಿದ್ದು, ಕೆಲವು ಸಾಧಕ–ರಿಗೆ ರಾಜ್ಯಮಟ್ಟದ ಪ್ರಶಸ್ತಿ ಲಭಿಸುವುದು ಯಾದಗಿರಿ ಜಿಲ್ಲೆಯ ಹೆಗ್ಗಳಿಕೆಗೆ ಕಾರಣವಾಗಿದೆ.

ಸುದ್ದಿಗೋಷ್ಠಿಯಲ್ಲಿ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿದ್ದಪ್ಪ ಲಿಂಗೇರಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಕೌಳೂರು ಗ್ರಾಮದಲ್ಲಿ ಹಜರತ್ ಸೈಯದ್ ಶಹಾಹುಸೇನ್ ಬಾಷಾ ದರ್ಗಾ ಜಾತ್ರೆ ಭಕ್ತಿಭಾವದಿಂದ ಆಚರಣೆ

ಯಾದಗಿರಿ:ತಾಲ್ಲೂಕಿನ ಕೌಳೂರು ಗ್ರಾಮದಲ್ಲಿ ಹಜರತ್ ಸೈಯದ್ ಶಹಾಹುಸೇನ್ ಬಾಷಾ ದರ್ಗಾ ಜಾತ್ರೆ ಇಂದು ಭಕ್ತಿಭಾವ ಹಾಗೂ ಸಾಂಪ್ರದಾಯಿಕ ಉತ್ಸಾಹದೊಂದಿಗೆ ನಡೆಯಿತು. ಜಾತ್ರೆಯ ಹೃದಯ ಭಾಗವೆಂದೇ ಪರಿಗಣಿಸಲ್ಪಡುವ ಗಂಧದ ಮೆರವಣಿಗೆ ರಾತ್ರಿ 11 ಗಂಟೆಗೆ ಆರಂಭಗೊಂಡು, ಬೆಳಗಿನ ಜಾವ 4 ಗಂಟೆಯವರೆಗೆ ನಿರಂತರವಾಗಿ ಭಕ್ತಿಸಾಗರದ ನಡುವೆ ಸಾಗಿತು. ರಸೂಲ್ ಸಾಬ್ ಅವರ ಮನೆಯಿಂದ ಆರಂಭವಾದ ಈ ವೈಭವಮಯ ಮೆರವಣಿಗೆ ದರ್ಗಾವರೆಗೆ ಭಕ್ತರ ಘೋಷಣೆಗಳು, ಧಾರ್ಮಿಕ ಗೀತೆಗಳು, ತಾಳಮದ್ದಲೆಗಳ ನಾದ ಮತ್ತು ಆಧ್ಯಾತ್ಮಿಕ ಮೆರಗುಗಳಿಂದ ಸಂಪೂರ್ಣ ಪ್ರದೇಶವೇ ಭಕ್ತಿ ಮಯವಾಗುವಂತೆ ಮಾಡಿತು. ಮೆರವಣಿಗೆಯಲ್ಲಿ ಶಿವಪ್ಪ ಡೋಂಗರ್, ಶರಣಪ್ಪ ಹಾಗೂ ಸಿದ್ದಪ್ಪ ನಾಯ್ಕೋಡಿ ಸೇರಿದಂತೆ ಊರಿನ ಅನೇಕ ಗಣ್ಯರು ಮತ್ತು ಭಕ್ತರು ಪಾಲ್ಗೊಂಡಿದ್ದರು.

# ಬಿ.ವಿ. ಭೂಮರಡ್ಡಿ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ದೀಪಾ ರಾಗ ನೇತೃತ್ವದಲಿಉಚಿತ ಆರೋಗ್ಯ ತಪಾಸಣೆ




ಬೀದರ : ಗೌರವಾನ್ವಿತ ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಸದಸ್ಯರು ಹಾಗೂ ಬಿ.ವಿ.ಬಿ. ಶಾಲಾ ಕಾಲೇಜು ಆವರಣದ ಸಂಚಾಲಕರಾದ ಡಾ. ರಜನೀಶ್ ಎಸ್. ವಾಲಿಯವರ ಮಾರ್ಗದರ್ಶನದಲ್ಲಿ ಹಾಗೂ ಬಿ.ವಿ. ಭೂಮರಡ್ಡಿ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ದೀಪಾ ರಾಗ ನೇತೃತ್ವದಲ್ಲಿ ಹಾಗೂ ಮುಖ್ಯ ಅತಿಥಿಯಾಗಿ ಆಗಮಿಸಿದ ರೋಟರಿ ಕ್ಲಬ್ ಸಿಲ್ವರ್ ಸ್ಟಾರನ ಅಧ್ಯಕ್ಷರಾದ ಶ್ರೀ ಆದೀಶ್ ಆರ್. ವಾಲಿಯವರು ಆಗಮಿಸಿ ಜೊತೆಗೆ ರೋಟರಿ ಕ್ಲಬ್ ಸಿಲ್ವರ್ ಸ್ಟಾನ ಉಪಾಧ್ಯಕ್ಷರಾದ ಶ್ರೀ ಆನಂದ ಕೊಟ್ಟರಕಿ ಹಾಗೂ ಕಾರ್ಯದರ್ಶಿಗಳಾದ ಶ್ರೀ ಕಿರಣ ಸಾಮುವೇಲ್ ವೈದ್ಯರಾದ ಶ್ರೀ ಮನೀಶ ಸಿಂಧೋಲ, ಸಹನಾ ಪಾಟೀಲ ಅವರ ನೇತೃತ್ವದಲ್ಲಿ ಬೀದರ ಜಿಲ್ಲೆಯ ಜನತೆಗೆ ಗುದಗೆ ಆಸ್ಪತ್ರೆಯ ವತಿಯಿಂದ ಜಿಲ್ಲೆಯ ಜನರ ಆರೋಗ್ಯದ ಬಗ್ಗೆ ಬಹಳ ಕಾಳಜಿ ಹೊಂದಿ ಅವರು ಸುತ್ತಮುತ್ತಲಿನ ಹತ್ತು ಹನ್ನೆರಡು ಗ್ರಾಮಗಳಿಗೆ ಭೇಟಿಕೊಟ್ಟು ಉದಾಹರಣೆಗೆ ಚಿಟ್ಟಾ ಗ್ರಾಮದ ಜನತೆಗೆ ಹದಿ ಹರಿಯದ ವಯಸ್ಕರ ಆರೋಗ್ಯದ ಸಮಸ್ಯೆ ಹಾಗೂ ವಯೋವೃದ್ಧರ ಆರೋಗ್ಯದ ಕಾಳಜಿ ಬಗ್ಗೆ ಆಸಕ್ತಿಹೊಂದಿ ಬೀದರ ಜಿಲ್ಲೆಯ ಪ್ರಸಿದ್ಧ ವೈದ್ಯರಾದ ಡಾ. ಸಚೀನ ಸಿ. ಗುದಗೆ, ಡಾ. ನಿತೀನ್ ಸಿ. ಗುದಗೆ, ಡಾ. ವೈಭವ ಭಧಭದೆ, ಡಾ. ಶೈಲೇಶ ಮಠ, ಡಾ. ಗೋವಿಂದ ಬಚ್ಚಾ, ಡಾ. ಸಂಗಮೇಶ ವಡಗಾಂವೆ ಇಂತಹ ನುರಿತ ವೈದ್ಯರನ್ನು ಮಹಾವಿದ್ಯಾಲಯಕ್ಕೆ ಕರೆಸಿ ಜನರ ಹಲವಾರು ಆರೋಗ್ಯದ ಸಮಸ್ಯೆಗಳಿಗೆ ಉಚಿತ ತಪಾಸಣೆ ಮಾಡಿ ಔಷಧಿ ಹಾಗೂ ಕಣ್ಣಿನ ಪರೀಕ್ಷೆಯನ್ನು ಸಹ ಮಾಡಿ ಜನರ ಮನಸ್ಸಿನಲ್ಲಿ ಇವರ ಸೇವೆ ಶ್ಲಾಘನೀಯವಾಗುವಂತೆ ಮಾಡಿದರು. ಈ ಕಾರ್ಯಕ್ರಮದಲ್ಲಿ ಸುಮಾರು 500 ರೋಗಿಗಳು ಪಾಲ್ಗೊಂಡು ಆರೋಗ್ಯದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡರು.

ಈ ಕಾರ್ಯಕ್ರಮದ ಸ್ವಾಗತವನ್ನು ಹಿಂದಿ ವಿಭಾಗದ ಮುಖ್ಯಸ್ಥರಾದ ಶ್ರೀ ಮಾರುತಿ ಭೀಮಣ್ಣಾ ಮಾಡಿದರೆ, ಸಂಚಾಲನೆಯನ್ನು ಇತಿಹಾಸ ವಿಭಾಗದ ಮುಖ್ಯಸ್ಥರಾದ ಡಾ. ಶಿವಲೀಲಾ ವೀರಯ್ಯಾ ಮಾಡಿದರೆ, ಗಣಿತ ವಿಭಾಗದ ಮುಖ್ಯಸ್ಥರಾದ ಡಾ. ಸಾಮ್ರಟ ಶಿವಪ್ಪ ಪಾಯದ್ ವಂದಿಸಿದರು. ಈ ಕಾರ್ಯಕ್ರಮದಲ್ಲಿ ಎನ್.ಎಸ್.ಎಸ್. 'ಅ' ಘಟಕದ ಅಧಿಕಾರಿಗಳಾದ ಡಾ. ಲಕ್ಷ್ಮೀ ವಿಶ್ವನಾಥ ಹಾಗೂ 'ಬ' ಘಟಕದ ಅಧಿಕಾರಿಯಾದ ಶ್ರೀ ಬಸವರಾಜ ಎಸ್. ಬಿರಾದಾರ ಉಪಸ್ಥಿತರಿದ್ದರು ಈ ಕಾರ್ಯಕ್ರಮದಲ್ಲಿ ಬಿ.ಎಡ್. ಕಾಲೇಜಿನ ವಿದ್ಯಾರ್ಥಿಗಳು, ಎನ್.ಸಿ.ಸಿ. ವಿದ್ಯಾರ್ಥಿಗಳು ಹಾಗೂ ಮಹಾವಿದ್ಯಾಲಯ ಬೋಧಕ, ಬೋಧಕೇತರರ ಸಿಬ್ಬಂದಿಗಳು ಹಾಜರಿದ್ದರು

# ಕುಡಿಯುವ ನೀರಿನ ಸಮಸ್ಯೆಗಳಾಗದಂತೆ ಮುಂಜಾಗ್ರತೆವಹಿಸಿ: ಸಚಿವ ಈಶ್ವರ ಬಿ. ಖಂಡ್ರೆ



ಬೀದರ : ಬೀದರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಗಳಾಗದಂತೆ ಮುಂಜಾಗ್ರತೆವಹಿಸಬೇಕು. ಬೇಸಿಗೆ ಇರುವುದರಿಂದ ಜಿಲ್ಲೆಯ ಯಾವುದೇ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆಗಳಿವೆ ಎಂಬ ದೂರುಗಳು ಬರದಂತೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸಬೇಕೆಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ. ಖಂಡ್ರೆ ಹೇಳಿದರು.

ಅವರು ಗುರುವಾರ ಬೀದರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಏಪ್ರಿಲ್. 11 ರಂದು ಬೀದರ ಜಿಲ್ಲೆಗೆ ಆಗಮಿಸುತ್ತಿರುವ ಹಿನ್ನೆಲೆ ಮತ್ತು ಜಿಲ್ಲೆಯ ಕುಡಿಯುವ ನೀರಿನ ಸಮಸ್ಯೆಗಳ ಕುರಿತು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ವಿವಿಧ ಇಲಾಖೆಯ ಅಧಿಕಾ–ರಿಗಳಿಗೆ ಕರೆದ ಸಭೆಯಲ್ಲಿ ಅಧ್ಯಕ್ಷತೆವಹಿಸಿ ಮಾತನಾಡಿದರು.

ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಏಪ್ರಿಲ್. 11 ರಂದು ಬೀದರಗೆ ಬರುತ್ತಿದ್ದು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಬೀದರ ಜಿಲ್ಲಾ ಘಟಕದ ವತಿಯಿಂದ ಹಮ್ಮಿಕೊಂಡಿರುವ 40 ನೇ ರಾಜ್ಯ ಪತ್ರಕರ್ತರ ಸಮ್ಮೇಳನದ ಉದ್ಘಾಟನೆಗೆ ಆಗಮಿಸುತ್ತಿದ್ದು. ಜಿಲ್ಲೆಯ ತುರ್ತಾಗಿರುವ ಸಮಸ್ಯೆಗಳ ಬಗ್ಗೆ ಪ್ರಗತಿ ಪರಿಶೀಲನಾ ಸಭೆ ಮಾಡಲು ತಿಳಿಸಿದ್ದು. ಬೇಸಿಗೆ ಇರುವುದರಿಂದ ಜಿಲ್ಲೆಯ ಜಾನುವಾರುಗಳಿಗೆ, ತಾಂಡಾ, ಜನವಸತಿ ಪ್ರದೇಶ ಸೇರಿದಂತೆ ಇತರೆ ಯಾವುದೇ ಭಾಗದಲ್ಲಿ ನೀರಿನ ಸಮಸ್ಯೆಗಳಾಗದಂತೆ ನೋಡಿಕೊಳ್ಳಬೇಕು. ನೀರಿನ ಸಮಸ್ಯೆಗಳಿದ್ದರೆ ದಿನದ 24 ಗಂಟೆಗಳಲ್ಲಿ ಸಂಬಂಧಿಸಿದ ಇಲಾಖೆಯವರು ಪರಿಹಾರ ಒದಗಿಸಬೇಕು ಎಂದರು.

ಗ್ರಾಮ ಪಂಚಾಯತಿ ಹಂತದಲ್ಲಿ ಪಿ.ಡಿ.ಓ ಗಳು. ತಾಲ್ಲೂಕು ಹಂತದಲ್ಲಿ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ನಗರಸ್ಥಳೀಯ ಸಂಸ್ಥೆಗಳ ಅಧಿಕಾ–ರಿಗಳು ಸೇರಿದಂತೆ ಇತರೆ ವಿವಿಧ ಇಲಾಖೆಯ ಅಧಿಕಾ–ರಿಗಳು ನೀರಿನ ಯಾವುದೇ ಸಮಸ್ಯೆಗಳಿದ್ದರೆ ತಕ್ಷಣ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಗಮನಕ್ಕೆ ತರಬೇಕು. ಮೇ ಮತ್ತು ಜೂನ್. ಇನ್ನೂ 2 ತಿಂಗಳು ಜಿಲ್ಲೆಯ ಯಾವುದೇ ಭಾಗದಲ್ಲಿ ನೀರಿನ ಸಮಸ್ಯೆಗಳಾಗಬಾರದು. ಕುಡಿಯುವ ನೀರಿನ ಯಾವುದೇ ಬಿಲ್ಲಗಳು ಪೆಂಡಿಂಗ್ ಇದ್ದರೆ ತಕ್ಷಣ ಅವುಗಳನ್ನು ಕ್ಲೀಯರ್ ಮಾಡಬೇಕೆಂದರು.

ಜಿಲ್ಲೆಯ ಆಯಾ ತಾಲ್ಲೂಕಿನ ತಹಶಿಲ್ದಾರರು. ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು ಟಾಸ್ಕಫೋರ್ಸ ಸಮಿತಿ ಸಭೆ ನಡೆಸಿ ಯಾವ ಗ್ರಾಮಗಳಲ್ಲಿ ನೀರಿನ ಸಮಸ್ಯೆಗಳಿವೆ, ಏನು ಕ್ರಮ ವಹಿಸಬೇಕೆಂಬುದರ ಕುರಿತು ಚರ್ಚಿಸಬೇಕು. ಔರಾದ, ಭಾಲ್ಕಿ, ಹುಮನಾಬಾದ, ಬಸವಕಲ್ಯಾಣ ಸೇರಿದಂತೆ ಎಲ್ಲಾ ತಾಲೂಕಿನ ತಹಶಿಲ್ದಾರರು. ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಪಿಡಿಓ ಗಳು ಈ ಕುರಿತು ಮುಂಜಾಗ್ರತೆವಹಿಸಬೇಕು. ಬಡಾವಣೆಗೆ ಬಿಡುವ ನೀರು ಪರೀಕ್ಷಿಸಿ. ಓವರ್ ಹೆಡ್ ಟ್ಯಾಂಕಗಳನ್ನು ಸ್ವಚ್ಚಗೊಳಿಸಬೇಕೆಂದು ಹೇಳಿದರು.

ಜಿಲ್ಲೆಯಲ್ಲಿ ಗ್ಯಾಸ್ ಸಮಸ್ಯೆಗಳಿವೆಯೆ ಎಲ್ಲಿಯೂ ಗ್ಯಾಸಗಳನ್ನು ಬ್ಲಾಕಲ್ಲಿ ಮಾರಾಟ ಆಗದಂತೆ ನೋಡಿಕೊಳ್ಳಬೇಕೆಂದು ಸಚಿವರು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು. ಬೀದರ ನಗರದಲ್ಲಿ ರಾಜ್ಯ ಮಟ್ಟದ ಪರ್ತಕರ್ತರ ದೊಡ್ಡ ಕಾರ್ಯಕ್ರಮ ನಡೆಯುತ್ತಿರುವುದ–ರಿಂದ ನಗರ ಸ್ವಚ್ಚತೆ ಮಾಡುವುದರ ಜೊತೆಗೆ ಎಲ್ಲೂ ಪ್ಲಾಸ್ಟಿಕ್ ಕವರಗಳು ಕಾಣಬಾರದು ಕಾರ್ಯಕ್ರಮಕ್ಕೆ ಬರುವ ಜನರಿಗೆ ಸರಿಯಾಗಿ ಕುಡಿಯುವ ನೀರಿನ ವ್ಯವಸ್ಥೆಯಾಗಬೇಕೆಂದು ಹೇಳಿದರು.

ಈ ಸಭೆಯಲ್ಲಿ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಗಿರೀಶ್ ಬದೋಲೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ, ಮಹಾನಗರ ಪಾಲಿಕೆ ಆಯುಕ್ತರಾದ ಮುಕುಲ್ ಜೈನ್, ಬೀದರ ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿ ಆಶಿಷ್ ರೆಡ್ಡಿ, ಅಪರ ಜಿಲ್ಲಾಧಿಕಾರಿ ಶಿವಾನಂದ ಕರಾಳೆ, ಸಹಾಯಕ ಆಯುಕ್ತರು, ಜಿಲ್ಲೆಯ ಎಲ್ಲಾ ತಾಲ್ಲೂಕಿನ ತಹಸೀಲ್ದಾರ, ತಾಲ್ಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು ಸೇರಿದಂತೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ವಿವಿಧ ಇಲಾಖೆಯ ಅಧಿಕಾ–ರಿಗಳು ಉಪಸ್ಥಿತರಿದ್ದರು.

# ಶಾಹೀನ್‌ನಲ್ಲಿ ಸಮ್ಮೇಳನ ಉಪ ಸಮಿತಿಗಳ ಸಭೆಪತ್ರಕರ್ತರ ಸಮ್ಮೇಳನ ಯಶಸ್ವಿಗೆ ಕೈಜೋಡಿಸಿ



ಬೀದರ್: ನಗರದಲ್ಲಿ ಏ. 11 ಹಾಗೂ 12 ರಂದು ನಡೆಯಲಿರುವ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 40ನೇ ಪತ್ರಕರ್ತರ ರಾಜ್ಯ ಸಮ್ಮೇಳನ ಯಶಸ್ವಿಗೆ ಜಿಲ್ಲೆಯ ಜನರು ಕೈಜೋಡಿಸಬೇಕು ಎಂದು ಶಾಹೀನ್ ಶಿಕ್ಷಣ ಸಂಸ್ಥೆಗಳ ಸಮೂಹದ ಅಧ್ಯಕ್ಷ ಡಾ. ಅಬ್ದುಲ್ ಖದೀರ್ ಹೇಳಿದರು.

ನಗರದ ಶಾಹೀನ್ ಪದವಿಪೂರ್ವ ವಿಜ್ಞಾನ ಕಾಲೇಜಿನಲ್ಲಿ ಗುರುವಾರ ನಡೆದ ಸಮ್ಮೇಳನದ ಸಾರಿಗೆ, ವಸತಿ, ಅತಿಥಿ ಸತ್ಕಾರ, ನೋಂದಣಿ ಮತ್ತಿತರ ಉಪ ಸಮಿತಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಪತ್ರಿಕಾ ರಂಗ ದೇಶದ ನಾಲ್ಕನೇ ಆಧಾರ ಸ್ತಂಭವಾಗಿದೆ. ಹೀಗಾಗಿ, ಜಿಲ್ಲೆಯಲ್ಲಿ ನಡೆಯುತ್ತಿರುವ ಪತ್ರಕರ್ತರ ಸಮ್ಮೇಳನ ಸರ್ವ ರೀತಿಯಿಂದಲೂ ಯಶಸ್ವಿಗೊಳಿಸುವುದು ಎಲ್ಲರ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಸಮ್ಮೇಳನಕ್ಕೆ ಶಾಹೀನ್ ಶಿಕ್ಷಣ ಸಂಸ್ಥೆಗಳ ಸಮೂಹದಿಂದ 25 ಬಗಳನ್ನು ನಿಯೋಜಿಸಲಾಗುವುದು.

ಏ. 11 ಹಾಗೂ 12 ರಂದು ರಾಜ್ಯ ವಿವಿಧೆಡೆಯಿಂದ ಬರುವ ಪತ್ರಕರ್ತರಿಗೆ ಸಾರಿಗೆ ಸೇವೆ ಒದಗಿಸಲಿವೆ ಎಂದು ಹೇಳಿದರು.

ಸಮೂಹದಿಂದ ಪತ್ರಕರ್ತರ ವಸತಿಗೆ 30 ವಸತಿಗೃಹಗಳನ್ನು ಒದಗಿಸಲಾಗುವುದು. ಪತ್ರಕರ್ತ–ರಿಗೆ ಉಡುಗೊರೆ ರೂಪದಲ್ಲಿ ಬ್ಯಾಗ್ ಕೊಡಲಾಗುವುದು. ಪತ್ರಕರ್ತರ ನೋಂದಣಿ, ವಸತಿ ವ್ಯವಸ್ಥೆಯ ಡಿಜಿಟಲ್ ಪ್ರಕ್ರಿಯೆಗೆ ಅಗತ್ಯ ಸಹಕಾರ ನೀಡಲಾಗುವುದು ಎಂದು ತಿಳಿಸಿದರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ್ ಮಾತನಾಡಿ, ಸಂಘದ ಪ್ರಶಸ್ತಿ ಪುರಸ್ಕೃತರು, ರಾಜ್ಯ ಪದಾಧಿಕಾರಿಗಳು ಹಾಗೂ ವಿವಿಧ ಜಿಲ್ಲಾ ಘಟಕಗಳ ಪದಾಧಿಕಾರಿಗಳಿಗೆ ಮೂರು ವಿಭಾಗಗಳಲ್ಲಿ ವಸತಿ ವ್ಯವಸ್ಥೆ ಕಲ್ಪಿಸಲು ಸಿದ್ಧತೆ ನಡೆದಿದೆ. ರಾಜ್ಯ ಕಾರ್ಯದರ್ಶಿ ಪುಂಡಲೀಕ ಬಾಲೋಜಿ ವಸತಿ ವ್ಯವಸ್ಥೆ ಮೇಲುಸ್ತುವಾರಿ ವಹಿಸಲಿದ್ದಾರೆ ಎಂದು ತಿಳಿಸಿದರು. ಎಲ್ಲ ಸಮಿತಿಯವರು ಸಮ್ಮೇಳನ ಅರ್ಥಪೂರ್ಣವಾಗುವಂತೆ ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸಬೇಕು ಎಂದರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಆನಂದ ದೇವಪ್ಪ, ಜಿಲ್ಲಾ ಅಡಾಕ್ ಸಮಿತಿ ಸದಸ್ಯ ಅಪ್ಪಾರಾವ್ ಸೌದಿ ಸಮ್ಮೇಳನ ಸಿದ್ಧತೆಯ ಮಾಹಿತಿ ನೀಡಿದರು.

ಸಂಘದ ಜಿಲ್ಲಾ ಅಡಾಕ್ ಸಮಿತಿ ಸದಸ್ಯ ಶಿವಕುಮಾರ ಸ್ವಾಮಿ, ವಸತಿ ಸಮಿತಿಯ ಬಸವರಾಜ ಕಾಮಶೆಟ್ಟಿ, ಶ್ರೀಕಾಂತ ಪಾಟೀಲ, ಸಂತೋಷ್ ಚೆಟ್ಟಿ, ಕಾರ್ತಿಕ ಸ್ವಾಮಿ, ಮಹೇಶ್ ಸಜ್ಜನ್, ಸಾರಿಗೆ ಸಮಿತಿಯ ಪೃಥ್ವಿರಾಜ್ ಎಸ್, ಸುನೀಲ್ ಕುಲಕರ್ಣಿ, ನೋಂದಣಿ ಸಮಿತಿಯ ಬಸವರಾಜ ಪವಾರ್, ಸ್ವಾಮಿದಾಸ್ ನಾಗೂರೆ, ಅತಿಥಿ ಸತ್ಕಾರ ಸಮಿತಿಯ ಮಾಥ–'ರ್‌ಂಡ್ ಜೋಶಿ ಮತ್ತಿತರರು ಇದ್ದರು.

# ಶಿವಲಿಂಗ ಸ್ಥಳಾಂತರಕ್ಕೆ ಕಿಡಿ: ಸೈದಾಪುರದಲ್ಲಿ ಮಠ ತೆರವು ವಿರುದ್ಧ ಭಕ್ತರ ತೀವ್ರ ಪ್ರತಿಕ್ರಿಯೆ ಮರುನಿರ್ಮಾಣಕ್ಕೆ ಭೀಮಾಶಂಕರ ಸ್ವಾಮೀಜಿ ಒತ್ತಾಯ



ಸೈದಾಪುರ:ಸಮೀಪದ ಬಾಲಯೋಗಿ ರಾಜೇಂದ್ರ ಮಹಾರಾಜರ ಐತಿಹಾಸಿಕ ಹಾಗೂ ಭಕ್ತಿಪೂರ್ಣ ಮಠವನ್ನು ತೆರವುಗೊಳಿಸಿರುವ ಘಟನೆ ವ್ಯಾಪಕ ಚರ್ಚೆಗೆ ಗ್ರಾಸವಾಗಿದ್ದು, ಶಿವಲಿಂಗ ಮೂರ್ತಿಯ ಸ್ಥಳಾಂತರದಿಂದ ಭಕ್ತರ ಆಸ್ಥೆ ಹಾಗೂ ಧಾರ್ಮಿಕ ಭಾವನೆಗಳಿಗೆ ಭಾರೀ ಆಘಾತ ಉಂಟಾಗಿದೆ ಎಂದು ಯಾದಗಿ–ರಿಯ ರಾಜೇಂದ್ರ ಮಠದ ಭೀಮಾಶಂಕರ ಸ್ವಾಮೀಜಿಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.ನಗರದಲ್ಲಿ ಗುರುವಾರ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಉದ್ದೇಶಿಸಿ ಮಾತನಾಡಿದ ಅವರು, ದಶಕಗಳ ಕಾಲ ಸಾವಿರಾರು ಭಕ್ತರ ಆಧ್ಯಾತ್ಮಿಕ ಕೇಂದ್ರವಾಗಿದ್ದ ಈ ಪವಿತ್ರ ಮಠವನ್ನು ಯಾವುದೇ ಪರ್ಯಾಯ ವ್ಯವಸ್ಥೆ ಮಾಡದೆ, ಏಕಪಕ್ಷೀಯವಾಗಿ ತೆರವುಗೊಳಿಸಿರುವ ಕ್ರಮವನ್ನು ತೀವ್ರವಾಗಿ ಖಂಡಿಸಿದರು. ಬಾಲಯೋಗಿ ರಾಜೇಂದ್ರ ಮಹಾರಾಜರು 1975–76ರಲ್ಲಿ ಸರ್ವೆ ಸಂಖ್ಯೆ 235, 236 ಮತ್ತು 221ರಲ್ಲಿ ಭೂಮಿ ಖರೀದಿ ಮಾಡಿಕೊಂಡು, ತಮ್ಮ ಸ್ವಂತ ಜಮೀನಿನಲ್ಲೇ ಮಠವನ್ನು ಸ್ಥಾಪಿಸಿ ಆಧ್ಯಾತ್ಮಿಕ ಸೇವೆ ಸಲ್ಲಿಸುತ್ತಿದ್ದರು. ಅಲ್ಲದೆ, ಗೋಶಾಲೆ ನಿರ್ಮಿಸಿ ಅನೇಕ ಗೋವುಗಳಿಗೆ ಆಶ್ರಯ ಕಲ್ಪಿಸಿ, ಸುತ್ತಮುತ್ತಲಿನ ಭಕ್ತರಲ್ಲಿ ಅಪಾರ ಭಕ್ತಿ, ನಂಬಿಕೆ ಹಾಗೂ ಗೌರವ ಗಳಿಸಿದ್ದರು ಎಂದು ವಿವರಿಸಿದರು.

# ಬೊಗಸೆಯಲ್ಲಿ ಅರಳುವ ನಿನ್ನಂದದ ಮುಖಕೆ

■ ಉದಯರಶ್ಮಿ ದಿನಪತ್ರಿಕೆ




## ಬಾಳ ದೇವತೆ,

ನಾನಿಂದು ಬಾನಿನಾಚೆಯ ಪರಿಧಿಯಲ್ಲಿ ರೆಕ್ಕೆ ಬಿಚ್ಚಿ ಹಾರುತ್ತಿದ್ದೇನೆಂದರೆ ಅದಕ್ಕೆ ಕಾರಣ ನಿನ್ನೊಂದಿಗೆ ಕಳೆದ ಸವಿ ಕ್ಷಣಗಳೇ ಹೊರತು ಬೇರೆನಿಲ್ಲ. ನಿನ್ನನ್ನು ಸೇರುವ ಮುನ್ನ ಬದುಕು ಹರಿದ ಗಾಳಿ ಪಟವಾಗಿತ್ತು. ಮನದೊಳಗೆ ಸುಂದರ ಕನಸುಗಳು ನುಸುಳಲು ಬಿಡದಂಥ ವಿಚಿತ್ರ ಪರಿಸ್ಥಿತಿ. ಒಳಗೊಳಗೆ ಅವಮಾನ ನುಂಗಿ ಕೊಳ್ಳುತ್ತಿದ್ದೆ. ಬಡತನದ ಅಸಹಾಯಕ ಸ್ಥಿತಿ ಕಣ್ಣೀರನ್ನೂ ಬತ್ತಿಸಿತ್ತು. ಹೋದಲೆಲ್ಲ ಹಡೆದವ್ವನಿಗಾದ ಅವಮಾನಗಳು ಸುತ್ತಿಕೊಂಡು ಬರುತ್ತಿದ್ದವು. ಹಣೆಯ



ಮೇಲಿನ ಗಾಯದ ಗೀರಿನಂತೆ ಎದ್ದು ಕಾಣುತ್ತಿದ್ದವು.ಬೀದಿ ದೀಪಗಳ ಕೆಳಗೆ ಪುಸ್ತಕ ತೆರೆದಾಗಲೂ ನನ್ನನ್ನು ನಿಲ್ಲಿಸಿ ಕೇಳುತ್ತಿದ್ದವು. ಬೆಟ್ಟದ ಮೇಲೆ ಚಳಿ ಬೀಸುವಾಗಲೂ ಮೈಯಲ್ಲಿ ಸಣ್ಣ ನಡುಕ. ಬದುಕು ಹೀಗೇ ನನ್ನನ್ನು ಕಪಿ ಮುಷ್ಟಿಯಲ್ಲಿ ಹಿಡಿದುಕೊಂಡೇ ನಡೆದರೆ ಗತಿ ಏನು? ಎಂಬ ಚಿಂತೆಯ ಸುಳಿಯಲ್ಲಿ ಸಿಕ್ಕಾಗ ಭರವಸೆಯ ಕಿರಣದಂತೆ ಬಂದ ಬಾಳ ದೇವತೆ ನೀನು. ಬೆಟ್ಟದ ಮೇಲಿನ ಹನುಮಂತನ ದೇವಾಲಯ ನನ್ನ ಖಾಯಂ ವಿಳಾಸ. ನೀನು ಪ್ರತಿ ಶನಿವಾರ ಗೆಳತಿಯರ ಗುಂಪಿನೊಂದಿಗೆ ತಪ್ಪದೇ ಆಂಜನೇಯನಿಗೆ ಕೈ ಮುಗಿಯಲು ಬರುತ್ತಿದ್ದೆ.

ನನ್ನೆಡೆಗೆ ವಿಶೇಷ ಪ್ರೀತಿಯ ನಗೆ ಚೆಲ್ಲಿ ನೋಡುತ್ತಿದ್ದೆ. ಅದೊಂದು ದಿನ ಸಂಜೆ ನೀನೊಬ್ಬಳೇ ಶನಿ ದೇವರಿಗೆ ಬಂದಿದ್ದೆ. ಎಂದಿನಂತೆ ನಾನು ದೇವಸ್ಥಾನದಿಂದ ಸ್ವಲ್ಪ ದೂರ ಇರುವ ಚಪ್ಪಡಿ ಕಲ್ಲಿನ ಮೇಲೆ ಒಂಟಿಯಾಗಿ ಕೂತಿದ್ದೆ. ಪ್ರದಕ್ಷಿಣೆ ಹಾಕಿ ಪೂಜೆ ಸಾಮಗ್ರಿಗಳನ್ನು ಹಿಡಿದು ಅತ್ತಿತ್ತ ನೋಡುತ್ತ ನಿಧಾನವಾಗಿ ನಾನು ಕುಳಿತಲ್ಲಿಗೆ ಬಂದೆ. ತೆಂಗಿನ ಕಾಯಿ ಚಿಪ್ಪು ಕೈಯಲ್ಲಿ ಕೊಟ್ಟು ಚಚ್ಚಲು ಹೇಳಿದೆ. ಚಚ್ಚಿ ಕೊಟ್ಟದ್ದನ್ನು ಮರಳಿ ನನಗೆ ಪ್ರಸಾದ ಎಂದು ನೀಡಿದ್ದೆ. ನನ್ನನ್ನೇ ದಿಟ್ಟಿಸುತ್ತ ಮೆಲ್ಲನೆ ಮಂದಹಾಸ ಬೀರಿದೆ. ನಿನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡಲು ಮನಸ್ಸು ಹಂಬಲಿಸಿತಾದರೂ ಧೈರ್ಯವಾಗಲಿಲ್ಲ. ಬೇರೆಡೆಗೆ ನೋಟ ಹರಿಸಿ ಕೂತೆ.

'ಯಾವಾಗಲೂ ನೀವಿಲ್ಲಿರುವುದನ್ನು ನೋಡಿದಿನಿ. ತುಂಬಾ ಮುಗ್ಧ ಜೀವಿ ನೀವು. ನನ್ನಂಥ ಅಂದ ಚೆಂದದ ಹುಡುಗಿಯ ಕಂಡರೆ ಮಂಗನಂತೆ ಹಲ್ಕಿರಿದು ಬೆನ್ನು ಬೀಳೋ ಹುಡಗರೇ ಜಾಸ್ತಿ ಅಂಥದ್ದರಲ್ಲಿ ನೀವು ಒಂದು ದಿನವೂ ಕಣ್ಣೆತ್ತಿ ನೋಡಿಲ್ಲ. ಅದ್ಯಾವ ಹುಳು ನಿಮ್ಮ ತಲೆ ಕೊರಿತಿದೆ ಅನ್ನೋ ವಿಷಯ ಅರ್ಥ-ರ್ವನೇ ಆಗ್ತಿಲ್ಲ. ನನಗೆ ತಿಳಿದ ಹಾಗೆ ಬದುಕಿನ ಬವಣೆಗಳು ನಿಮ್ಮನ್ನು ತಿನ್ನುತ್ತಿರಬಹುದು. ಸಮಸ್ಯೆಗಳು ಯಾರಿಗಿಲ್ಲ ಹೇಳಿ. ನಿಮಗೆ ದುಡ್ಡಿನ ಸಮಸ್ಯೆ. ದುಡ್ಡಿದ್ದವರಿಗೆ ದುಡ್ಡು ಇದ್ದಾಗ ಮಾತ್ರ ಎಲ್ಲರೂ ನಮ್ಮವರು. ದುಡ್ಡು ಕಳೆದು ಹೋದರೆ ಯಾರೂ ನನ್ನೊಂದಿಗಿಲ್ಲ. ಅನ್ನೋ ಸಮಸ್ಯೆ. ತಲೆ ಇರೋರು ಎಲೆ ಮಾರಿ ಜೀವನ ಮಾಡ್ತಾರೆ. ನಿಜ ಹೇಳಬೇಕಂದರೆ ಬಡತನ ಅನ್ನೋದು ಶಾಪ ಅಲ್ಲ. ಸೂಪ್ತ ಸಾಮರ್ಥ್ಯ ಹೊರಗೆಳೆಯೋ ಸಾಧನ. ಅದೊಂದು ಸುವರ್ಣ ಅವಕಾಶ.'ಎನ್ನುತ್ತ ಕಲ್ಲಿನ ಅಂಚಿನ ಮೇಲಿಟ್ಟಿದ್ದ ನನ್ನ ಕೈ ಮೇಲೆ ಕೈ ಇರಿಸಿ ಧೈರ್ಯ ತುಂಬಿದೆ. ಕಾರ್ಗತ್ತಲು ತುಂಬಿದ ಬದುಕಿನಲ್ಲಿ ನಿನ್ನ ಸ್ಪೂರ್ತಿ ಮಾತುಗಳು ಬೆಳಕಿನ ಬೀಜದಂತೆ ತಲೆಯಲ್ಲಿ ಮೊಳೆಯತೊಡಗಿದವು. ನೀನಾಡಿದ ಮಾತುಗಳು ನಿನ್ನ ಮೃದು ಸ್ಪರ್ಷ ಪುನಃ ಪುನಃ ನೆನಪಾಗಿ ರಾತ್ರಿಯೆಲ್ಲ ಕಣ್ರೆಪ್ಪೆಗಳು ಅಂಟಿಕೊಳ್ಳಲೇ ಇಲ್ಲ

ಭಗಿರಥ ಪ್ರಯತ್ನ ಮಾಡಿಯಾದರೂ ಸರಿ ಮೇಲೇಳಲೇಬೇಕೆಂದು ಅಂದೇ ನಿರ್ಧ-





ರಿಸಿದೆ. ವಾಚನಾಲಯದಲ್ಲಿರುವ ಎಲ್ಲ ಪುಸ್ತಕಗಳ ತಿರುವಿ ಹಾಕದೇ ಬಿಡಲಿಲ್ಲ. ಐದಾರು ತಿಂಗಳ ಅಜ್ಞಾತವಾಸದಂತೆ ಕಳೆದೆ. ನಿನ್ನನ್ನು ಕಾಣುವ ಹಂಬಲ ಹೆಚ್ಚಾಗಿ ಶನಿವಾರ ಸಂಜೆ ಬೆಟ್ಟ ಹತ್ತಿದೆ. ನೀನೇ ಮಾತಿಗೆಳದೆ.ಸಂತಸದ ಭರದಲ್ಲಿ ನನ್ನಿಂದ ಮಾತು ಹೊರ ಬರಲಿಲ್ಲ. ಒಲವ ಕಂಗಳಿಂದ ನೋಡುತ್ತ 'ಏನ್ ಸಮಾಚಾರ? ಇಷ್ಟು ದಿನ ಎಲ್ಲಿ ಮಾಯ ಆಗಿದ್ರಿ?' ಎಂದು ಕಣ್ಮಿಟುಕಿಸಿದೆ. ನನ್ನ ಜೊತೆ ಹೇಳಿಕೊಳ್ಳೋಕೆ ನಾಚಿಕೆ ಅಡ್ಡ ಆಗ್ತಿದೆಯಾ? ಎಂದು ಕಿಚಾಯಿಸಿ ನಿನ್ನ ಮೃದುವಾದ ಕೈ ಬೆರಳುಗಳೊಂದಿಗೆ ನನ್ನ ಒರಟಾದ ಬೆರಳುಗಳನು ಹಿಡಿದುಕೊಂಡೆ. ಹಿತವಾದ ಸ್ಪರ್ಷವೆನಿಸಿ ನಿನ್ನನ್ನೇ ದಿಟ್ಟಿಸುತ್ತ ಕುಳಿತೆ. ಯಾರಾದರೂ ನೋಡಿದರೆ ಎಂದು ಭಯವೆನ್ನಿಸಿತು ಆದರೂ ಕೈಯನ್ನು ಬಿಡಿಸಿಕೊಳ್ಳುವ ಮನಸ್ಸಾಗಲಿಲ್ಲ. ಯಾರೋ ನೋಡ್ತಾರೆ ಅನ್ನೋ ಭಯ ಬೇಡ. ನೀನೆಂದ್ರೆ ನಂಗೆ ತುಂಬಾನೇ ಇಷ್ಟ. ಎನ್ನುತ್ತ ಕೈ ಅದುಮಿದೆ.. ಮತ್ತಷ್ಟು ಪುಳಕವೆನಿಸಿತು. 'ಇಲ್ಲ ನೀನೇ ಹೇಳು ನಾ ಕೇಳ್ತಿನಿ.' ಎಂದು ಹೇಳುವಾಗ ದನಿ ನಡುಗುತ್ತಿತ್ತು. ಕೈ ಹಿಡಿದೇ ಕೂತೆ. ನಿನ್ನ ಮಾತಿಗೆ ಕಿವಿಯಾದೆ.

ನೀನು ನನಗೆ ತಾಗುವಂತೆ ಕುಳಿತಿದ್ದರಿಂದ ನಿನ್ನ ಮೈ ಸುವಾಸನೆಯ ಘಮಲು ಮೂಗಿಗೆ ತಾಕಿ ತಡೆಯಲಾರೆನ್ನಿಸಿ ನನ್ನ ಬಾಹುಗಳಲ್ಲಿ ಗಟ್ಟಿಯಾಗಿ ಬಂಧಿಸಿ ಬಿಡಬೇಕೆನ್ನಿಸಿತು. ಬಾಚಿ ತಬ್ಬಿಕೊಂಡರೆ ನೀನು ಏನೆಂದುಕೊಳ್ಳುವೆ ಏನೋ ಎಂದು ಸುಮ್ಮನಾದೆ. ನೀನು ನನ್ನೆಡೆಗೆ ಪ್ರೀತಿ ತುಂಬಿದ ನೋಟ ಚೆಲ್ಲುತ್ತ 'ಕಳೆದ ಐದಾರು ತಿಂಗಳಲ್ಲಿ ಒಂಚೂರು ಬದಲಾಗಿಲ್ಲ. ಆದರೆ ಕಟ್ಟಿದ ಸಿಇಟಿ ಪರೀಕ್ಷೆಗೆ ತಯಾರಿ ಜೋರಾಗಿ ಮಾಡಿದಿಯಾ ಅಂತ ನಿನ್ನ ಕಂಗಳೇ ಹೇಳ್ತಿವೆ. ಈ ಸಲ ನೌಕರಿ ಖಂಡಿತ ಸಿಕ್ಕೇ ಸಿಗುತ್ತೆ. ನಿನ್ನ ಹಡದವ್ವನ ದುಃಖ ಕೊನೆಗೊಳ್ಳುವ ಕಾಲ ಸನಿಹ ಬಂದಿದೆ.' ಅಂದೆ ದೈನ್ಯತೆಯಿಂದ ನಿನ್ನ ನೋಡಿದೆ. ಮುಸ್ಸಂಜೆ ಸುತ್ತಲೂ ಕತ್ತಲಾವರಿಸುತ್ತಿತ್ತು. 'ತಡವಾಗುತ್ತೆ. ಮನೆಯಲ್ಲಿ ದಾರಿ ಕಾಯ್ತಿರ್ತಾರೆ. ಹೋಗೋಣ್ವಾ.' ಎಂದು ನನ್ನೆದೆಗೆ ನವಿರಾಗಿ ತಿವಿದು ನಿನ್ನ ಗಾಡಿಯ ಕೀ ಕೈಗಿತ್ತೆ. 'ನೀನೇ ಓಡಿಸು ನಾ ಹಿಂದೆ ಕೂತ್ಕೋತಿನಿ.' ಎಂದು ಜಂಭದ ಚೀಲ ಹೆಗಲೇರಿಸಿಕೊಂಡೆ. ಆ ದಾರಿಯಲ್ಲಿ ಗಾಡಿಗಳು ಆಗೊಮ್ಮೆ ಈಗೊಮ್ಮೆ ಎದುರಾಗುತ್ತಿದ್ದವು. ಕತ್ತಲಾಗುತ್ತಿದ್ದಂತೆ ನಿಧಾನವಾಗಿ ಗಾಡಿ ಓಡಿಸುತ್ತಿದ್ದ ನನ್ನ ಬೆನ್ನಿಗೆ ಮುಖ ಒತ್ತಿದೆ. ನಿನ್ನ ಕಪ್ಪಾದ ಮುಂಗುರಳಗಳು ಕೆನ್ನೆಗೆ ತಾಕುತ್ತಿದ್ದವು. ಕೂದಲಿನ ಪರಿಮಳ ಹುಚ್ಚು ಹಿಡಿಸ ಹತ್ತಿತು. ಒಮ್ಮೆ ಗಟ್ಟಿಯಾಗಿ ಆಲಿಂಗಿಸಿದರೆ ತಪ್ಪೇನು ಆಗಲ್ಲ ಎಂದು ಹೇಳಬೇಕೆನಿಸಿತು. ನೀರವ ಮೌನ ಇಬ್ಬರೂ ಮಾತನಾಡುತ್ತಿಲ್ಲ. ಧೈರ್ಯ ತಂದುಕೊಂಡು ಸ್ವಲ್ಪ ಹಿಂದೆ ಸರಿದೆ.'ಇದೆಲ್ಲ ಕೊರಳಿಗೆ ತಾಳಿ ಕಟ್ಟಿದ ಮೇಲೆ.' ಎಂದು ನಕ್ಕೆ. ಗಾಡಿ ನಿಲ್ಲಿಸಿ ನಾನು ಮುಖ ತಗ್ಗಿಸಿದೆ.. 'ಚಿಂತಿಸದಿರು. ನಾನು ಎಂದೆಂದಿಗೂ



ನಿನ್ನವಳೆ. ನೀನೇ ನನ್ನುಸಿರು.' ಎಂದಾಗ ಎಷ್ಟೇ ತಡೆದುಕೊಂಡರೂ ಕಣ್ಣಲ್ಲಿ ನೀರು ಜಿನುಗಿತು. ತಗ್ಗಿಸಿದ ನನ್ನ ಮುಖವನ್ನೆತ್ತಿ ಮೆಲ್ಲಗೆ ಹಣೆಗೆ ಹೂ ಮುತ್ತನಿಕ್ಕಿದೆ. ನನ್ನ ಮಾತಿಗೂ ಕಾಯದೇ ಜೋರಾಗಿ ಎಕ್ಸಲೇಟರ್ ತಿರುವಿ ಹೊರಟೇ ಬಿಟ್ಟೆ. ನಿನ್ನ ಕನಸಿನಂತೆ ನನ್ನ ಹಡೆದವ್ವನ ದುಃಖಗಳಿಗೆಲ್ಲ ಮಂಗಳ ಹಾಡುವ ಸುಯೋಗ ಕೂಡಿ ಬಂದಿದೆ. ನಾನೀಗ ನಿನಗೆ ತಕ್ಕ ವರ. ಬೆಟ್ಟ ಹತ್ತಿ ಬಂದು ಬಿಡು. ಬ್ರಹ್ಮಚಾರಿಯನ್ನು ಸಾಕ್ಷಿಯಾಗಿರಿಸಿ ಮೂರು ಗಂಟು ಹಾಕುವೆ. ನಿನ್ನ ಓಲಾಡುವ ಂಗುರುಳುಗಳನು ಹಿಂದೆ ಸರಿಸಿ ಬೊಗಸೆಯಲ್ಲಿ ಅರಳುವ ನಿನ್ನಂದದ ಮುಖಕೆ ಮುತ್ತಿನ ಮಳೆಗರೆಯಲು ಕಾಯುತಿರುವೆ.

**ಎಂದೆಂದಿಗೂ ನಿನ್ನವನೇ ಆದ**
ನಿನ್ನ ಉಸಿರು

ಲೇಖನ
ಜಯಶ್ರೀ.ಜೆ. ಅಬ್ಬಿಗೇರಿ
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ
ಮೊ: 9449234142



# ಗುರು ಸಂಗನಬಸವ ಸ್ವಾಮೀಜಿ ಅಡ್ಡಪಲ್ಲಕ್ಕಿ ಉತ್ಸವ & ಅಗ್ನಿ ಪ್ರವೇಶ

■ ಉದಯರಶ್ಮಿ ದಿನಪತ್ರಿಕೆ

ಇಂಡಿ: ತಾಲೂಕಿನ ಲಚ್ಯಾಣದಲ್ಲಿ ನಡೆದ ಸದ್ಗುರು ಶ್ರೀ ಶಂಕರಲಿಂಗ ಶಿವಯೋಗಿಗಳ ಮಹಾರಥೋತ್ಸವ ಅಂಗವಾಗಿ ಬುಧವಾರದಂದು ಅಗ್ನಿ ಶಮನ ಕಾರ್ಯಕ್ರಮ ನೆರೆದ ಸಹಸ್ರಾರು ಭಕ್ತರ ಜಯಘೋಷಗಳೊಂದಿಗೆ ವಿಜೃಂಭಣೆಯಿಂದ ನಡೆಯಿತು.

ಉತ್ಸವದ ಅಂಗವಾಗಿ ನಿಗಧಿಯಂತೆ ಲಚ್ಯಾಣ ಹಾಗೂ ಬಂಥನಾಳ ಮಠದ ಪ್ರಸ್ತುತ ಪೀಠಾಧೀಶರಾದ ಶ್ರೀ ವೃಷಭಲಿಂಗೇಶ್ವರ ಮಹಾ ಶಿವಯೋಗಿಗಳ ಅಡ್ಡ ಪಲ್ಲಕ್ಕಿ ಉತ್ಸವ ನಡೆಯಬೇಕಿತ್ತು. ಆದರೆ ಬಂಥನಾಳ ಪೂಜ್ಯರ ಅಪ್ಪಣೆಯ ಮೇರೆಗೆ ಯರನಾಳ ಮಠದ ಪೀಠಾಧೀಶರಾದ ಪೂಜ್ಯ ಗುರು ಸಂಗನಬಸವ ಮಹಾಸ್ವಾಮೀಜಿ ಅವರ ಅಡ್ಡ ಪಲ್ಲಕ್ಕಿ ಉತ್ಸವ ಹಾಗೂ ಅಗ್ನಿ ಪ್ರವೇಶ ಕಾರ್ಯಕ್ರಮ ಇದೇ ಮೊದಲ ಬಾರಿಗೆ ನಡೆಯಿತು. ಅಪರೂಪದ ಈ ದೃಶ್ಯಕ್ಕೆ ನೆರೆದ ಸಹಸ್ರಾರು ಜನರು ಸಾಕ್ಷಿಯಾಗಿ ಪೂಜ್ಯರ ದರ್ಶನ ಪಡೆದು ಪುನೀತರಾದರು.

ಶ್ರೀ ಸಿದ್ದಲಿಂಗ ಮಹಾರಾಜರ ಐಕ್ಯ ಮಂಟಪದಿಂದ ಆರಂಭವಾದ ಯರನಾಳ ಪೂಜ್ಯರ ಪಲ್ಲಕ್ಕಿ ಉತ್ಸವ ಭವ್ಯ ಮೆರವಣಿಗೆಯೊಂದಿಗೆ ಉತ್ತರ ದಿಕ್ಕಿನ ಮಠದ ಮಹಾದ್ವಾರ ಬಾಗಿಲಿನ ಮುಂಭಾಗದ ಪಾದಗಟ್ಟೆಯ ವರೆಗೆ ವಾದ್ಯ ಮೇಳದೊಂದಿಗೆ ನಡೆಯಿತು.

ಬಳಿಕ ಪುರವಂತರೊಂದಿಗೆ ಅಗ್ನಿ ಶಮನ ಕಾರ್ಯಕ್ರಮ ಮಠದ



ಸಂಪ್ರದಾಯದಂತೆ ಸಂಭ್ರಮದಿಂದ ನೇರವೇರಿತು.

ಸುಕ್ಷೇತ್ರ ಯರನಾಳ ಮಠಕ್ಕೂ ಲಚ್ಯಾಣ ಮಠಕ್ಕೂ ಅವಿನಾಭಾವ ಸಂಬಂಧ. ಲಚ್ಯಾಣ ಮಠ ಬಂಥನಾಳ ಮಠದ ಶಾಖಾ ಮಠವಾಗಿದೆ. ಲಚ್ಯಾಣ ಹಾಗೂ ಬಂಥನಾಳ ಮಠದ ಈ ಹಿಂದಿನ ಪೀಠಾಧೀಶ ರಾಗಿದ್ದ ಶ್ರೀ ಸಂಗನಬಸವ ಮಹಾಶಿವಯೋಗಿಗಳು

ಈ ಮಠದ ಪೀಠಾಧೀಶರಾಗುವ ಮುನ್ನ ಯರನಾಳದ ಮಠದ ಪೀಠಧೀಶರಾಗಿದ್ದರು. ಇಂತಹ ವೀರಕ್ತ ಮಠ ಯರನಾಳ ಮಠದ ಪ್ರಸ್ತುತ ಪೀಠಧೀಶರಾದ ಶ್ರೀ ಗುರು ಸಂಗನಬಸವ ಮಹಾಸ್ವಾಮೀಜಿ

ಅವರ ಅಡ್ಡ ಪಲ್ಲಕ್ಕಿ ಉತ್ಸವ ನಡೆದದ್ದು ಭಕ್ತರ ಸಂತಸ ಇಮ್ಮಡಿಗೊಳಿಸಿದೆ. ಲಚ್ಯಾಣ ಕ್ಷೇತ್ರದಲ್ಲಿ ಈ ಹಿಂದೆ ನಡೆದ ಉತ್ಸವದಲ್ಲಿ ಯರನಾಳ ಮಠದ ಈ ಹಿಂದಿನ ಪೀಠಾಧೀಶರಾಗಿದ್ದ ಶ್ರೀ ದಯಾನಂದ ಪೂಜ್ಯರ ಅಡ್ಡಪಲ್ಲಕ್ಕಿ ಉತ್ಸವ ಭವ್ಯವಾಗಿ ಜರುಗಿತ್ತು ಎಂದು ಭಕ್ತಿಯಿಂದ ಸ್ಮರಿಸುತ್ತಾರೆ ಸ್ಥಳೀಯ ನಿವೃತ್ತ ಪ್ರಾಚಾರ್ಯ ಎ. ಪಿ. ಕಾಗವಾಡ. ಇದೇ ದಿನ ರಾತ್ರಿ ಖ್ಯಾತ ಕಲಾವಿದ ಸಿದ್ದು ನಾಲವತವಾದ ನೇತೃತ್ವದಲ್ಲಿ ಬಂಜೆಯ ತೊಟ್ಟಿಲು ಎಂಬ ಸಾಮಾಜಿಕ ನಾಟಕದ ಯಶಸ್ವಿ ಪ್ರದರ್ಶನಗೊಂಡು ನೆರೆದ ಪ್ರೇಕ್ಷಕರ ಮನಗೆದ್ದಿತು.

ಈ ದಿನ ಇಲ್ಲಿನ ಅನ್ನ ದಾಸೋಹ ಕೇಂದ್ರದಲ್ಲಿ ಭಕ್ತರು ವಿಶೇಷ ಅನ್ನ ಪ್ರಸಾದ ಸವಿದು ಕೃತಾರ್ಥರಾದರು.

# ಮಾನವೀಯತೆ, ಸಹಾನುಭೂತಿ ಸಾರಿದ ಈದ್ ಮಿಲಾದ್

ಕಲಬುರಗಿ:ಈದ್ ಹಬ್ಬವು ಕೇವಲ ಒಂದು ಧರ್ಮಕ್ಕೆ ಸೀಮಿತವಲ್ಲದೆ, ಮಾನವೀಯತೆ, ಸಹಾನುಭೂತಿ, ಕ್ಷಮೆ ಮತ್ತು ಸಹಬಾಳ್ವೆ ಎಂಬ ಸಾರ್ವತ್ರಿಕ ಮೌಲ್ಯಗಳನ್ನು ಸಾರುತ್ತದೆ ಎಂದು ಮಂಗಳೂರಿನ ಚಾರ್ಟರ್ಡ ಅಕೌಂಟೆಂಟ್ ಆದ ಇಶಾಕ್ ಪುತ್ತೂರು ಹೇಳಿದರು.

ಕೆ.ಪಿ.ಟಿ.ಸಿ.ಎಲ್ ಮುಸ್ಲಿಂ ಉದ್ಯೋಗಿಗಳ ಕಲ್ಯಾಣ ಸಂಘದ ವತಿಯಿಂದ ಈದ್ ಮಿಲಾದ್ ಕಾರ್ಯಕ್ರಮವನ್ನು ಕೆಇಬಿ ಎಂಜಿನಿಯರ್ ಅಸೋಸಿಯೇಷನ್ ಹಾಲ್, ಜೆಸ್ಕಾಂ ನಿಗಮ ಕಚೇರಿ ಆವರಣದಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ಹಂಚಿಕೊಳ್ಳುವ ಸಂತೋಷವೇ ನಿಜವಾದ ಸಂತೋಷ" ಎಂಬ ಸಂದೇಶವನ್ನು ಈ ಹಬ್ಬ ನೀಡುತ್ತದೆ. ಧರ್ಮವನ್ನು ಪ್ರೀತಿಸುವವರು ಮನುಷ್ಯರನ್ನು ಪ್ರೀತಿಸುತ್ತಾರೆ ಎಂದು ಖುರಾನ್ ಹಾಗೂ ಈದ್ ಹಬ್ಬದ ಮಹತ್ವವನ್ನು ವಿವರಿಸಿದರು.

ಇದೇ ವೇಳೆ ಮಾತನಾಡಿದ ಜೆಸ್ಕಾಂನ ಅಧ್ಯಕ್ಷ ಪ್ರವೀಣ್ ಪಾಟೀಲ್ ಹರವಾಳ ಅವರು, ಯಾವ ಊರಿನಲ್ಲಿ ಜಾತಿ-ಜಾತಿ ಎಂದು ಜಗಳವಿಲ್ಲವೋ ಆ ಊರು ಸಂತೋಷದಿಂದ ಕೂಡಿರುತ್ತದೆ. ಮಾನವೀಯತೆಯೇ ಮೊದಲು ಎಂದು ಎಲ್ಲಾ ಧರ್ಮಗಳೂ ಸಾರುತ್ತವೆ ಎಂದು ಹೇಳಿದರು.

ಕಾರ್ಯಕ್ರಮದ ಮತ್ತೊರ್ವ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಜೆಸ್ಕಾಂನ ಮಹಿಳಾ ದೂರು ನಿವಾರಣಾ ಕೋಶದ ಅಧ್ಯಕ್ಷ ಎ.ಹೆಚ್. ಮುಮ್ತಾಜ್ ಅವರು ಮಾತನಾಡಿದರು

ಈ ಕಾರ್ಯಕ್ರಮದಲ್ಲಿ ಜೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕ ಕೃಷ್ಣ ಬಾಜಪಾಯಿ,ಚಂದ್ರಕಾಂತ್ ಪಾಟೀಲ್, ರಾಮಸ್ವಾಮಿ ಎಂ. ಎಲ್, ಬಾಬು ಕೋರೆ, ಶಿವಾನಂದ ತೋಳೆ, ಸಚಿನ್ ಹುಂಡೇಕರ್, ಸಂತೋಷ ವಡ್ಕಿ, ಆತಿಫ್ ಪಾಶಾ, ಸಲೀಂ ಪಾಟೀಲ್ ಸೇರಿದಂತೆ ಕೆಪಿಟಿಸಿಎಲ್ ಮತ್ತು ಜೆಸ್ಕಾಂನ ಎಲ್ಲ ಅಧಿಕಾರಿಗಳು ಭಾಗವಹಿಸಿದ್ದರು.

# ಸಿ.ವಿ.ರಾಮನ್ ಪ.ಪೂ ಕಾಲೇಜ್ ಉತ್ತಮ ಸಾಧನೆ

■ ಉದಯರಶ್ಮಿ ದಿನಪತ್ರಿಕೆ

ಇಂಡಿ: ನಗರದ ಸಿ.ವಿ. ರಾಮನ್ ಪದವಿ ಪೂರ್ವ ವಿಜ್ಞಾನ ಕಾಲೇಜಿನ ವಿದ್ಯಾರ್ಥಿಗಳು 2025-26 ನೇ ಸಾಲಿನ ದ್ವಿತೀಯ ಪಿ.ಯು ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದು ಇಂಡಿ ತಾಲೂಕಿಗೆ ಕೀರ್ತಿ ತಂದಿದ್ದಾರೆ ಕಾಲೇಜಿನ ಒಟ್ಟು ವಿದ್ಯಾರ್ಥಿಗಳು 100% ರಷ್ಟು ಫಲಿತಾಂಶ ಲಭಿಸಿದೆ. ವಿದ್ಯಾರ್ಥಿನಿ ಕುಮಾರಿ ಅಶ್ವಿನಿ ಹಿರೇಮಠ್ 96% (576)ಮೂಲಕ ಕಾಲೇಜಿಗೆ ಪ್ರಥಮ, ಕುಮಾರಿ ಸೃಷ್ಟಿ ಸಾಲಕ್ಕಿ 95.33%(572) ದ್ವಿತೀಯ, ಕುಮಾರಿ ಪ್ರತೀಕ್ಷಾ ಅಂಬೂರೆ 94%(564), ಕು.ವಿಜಯ ಹೊಸೂರ 94%(564) ತೃತೀಯ ಸ್ಥಾನ









ಪಡೆದಿದ್ದಾರೆ. 15 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 23 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಪಾಸಾಗಿ ಹೆಮ್ಮೆ ತಂದಿದ್ದಾರೆ ವಿದ್ಯಾರ್ಥಿಗಳ ಸಾಧನೆ ಕಂಡು ಭೌತಶಾಸ್ತ್ರ ವಿಷಯದಲ್ಲಿ ಕುಮಾರಿ ಅಶ್ವಿನಿ ಹಿರೇಮಠ್ ಮತ್ತು ಕುಮಾರ ವಿಜಯ ಹೊಸೂರ್ ಇಬ್ಬರು ವಿದ್ಯಾರ್ಥಿಗಳು ನೂರಕ್ಕೆ ನೂರು(100/100) ಅಂಕ ಪಡೆದು ಸಾಧನೆಗೈದಿದ್ದಾರೆ ಕಾಲೇಜಿನ ಪ್ರಾಚಾರ್ಯೆ ವಿಶಾಲಾಕ್ಷಿ ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿ ವರ್ಗಕ್ಕೆ ಅಭಿನಂದಿಸಿದ್ದಾರೆ.ಗ್ರಾಮೀಣ ವಿದ್ಯಾರ್ಥಿಗಳ ಸಾಧನೆಯಲ್ಲಿ ಕಾಲೇಜಿನ ಬಹಳಷ್ಟು ಪರಿಶ್ರಮವಿದೆ ಎಂದು ಸಂಸ್ಥೆಯ ಸಂಸ್ಥಾಪಕರಾದ ಶಿವಾನಂದ್ ಕಾಮಗೊಂಡ್ ಅವರು ಹರ್ಷ ವ್ಯಕ್ತಪಡಿಸಿದ್ದಾರೆ.

# ಅಧ್ಯಕ್ಷರಾಗಿ ಮಹೇಶ್, ಉಪಾಧ್ಯಕ್ಷರಾಗಿ ಜಯ ಅವಿರೋಧ ಆಯ್ಕೆ

■ ಉದಯರಶ್ಮಿ ದಿನಪತ್ರಿಕೆ

ಹೆಚ್ ಡಿ ಕೋಟೆ: ತಾಲೂಕಿನ ತುಂಬಸೋಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಬಿಜೆಪಿ ಬೆಂಬಲಿತ ಜೆಡಿಎಸ್ ಅಭ್ಯರ್ಥಿ ಮಹೇಶ್ ಡಿಪಿ ದೇವಲಾಪುರ, ಉಪಾಧ್ಯಕ್ಷರಾಗಿ ಬಿಜೆಪಿ ಬೆಂಬಲಿತ ಜಯಾ ಕೆಂಡಗಣಸ್ವಾಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 12 ಜನ ನಿರ್ದೇಶಕರಿದ್ದು ನಾಮಪತ್ರ ಸಲ್ಲಿಸಲು ಶುಕ್ರವಾರ ಬೆಳಿಗ್ಗೆ 11:30 ರವರೆಗೆ ಸಮಯ ನಿಗದಿಪಡಿಸಲಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಮಹೇಶ್. ಉಪಾಧ್ಯಕ್ಷ ಸ್ಥಾನಕ್ಕೆ ಜಯ ಕೆಂಡಗಣಸ್ವಾಮಿ ಹೊರತುಪಡಿಸಿ ಬೇರೆ ಯಾರು ನಾಮಪತ್ರ ಸಲ್ಲಿಸದ ಹಿನ್ನೆಲೆ, ಚುನಾವಣಾಧಿಕಾರಿ ರವೀಶ್ ಅವರು ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಹೆಸರು ಘೋಷಣೆ ಮಾಡಿದರು. ಹೆಸರು ಘೋಷಣೆ ಬಳಿಕ ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರು ಹೊರಗಡೆ ಪಟಾಕಿ ಸಿಡಿಸಿ, ಸಿಹಿಹಂಚಿ ಸಂಭ್ರಮಿಸಿದರು. ಬಳಿಕ ಅಭಿಮಾನಿಗಳು ಅಧ್ಯಕ್ಷ ಮಹೇಶ್ ಹಾಗೂ ಉಪಾಧ್ಯಕ್ಷರಾಗಿರುವ ಜಯ ಅವರಿಗೆ ಸನ್ಮಾನಿಸಿದರು.

ಈ ವೇಳೆ ಮಾತನಾಡಿದ ನೂತನ ಅಧ್ಯಕ್ಷ ಮಹೇಶ್ ಡಿಪಿ, ಸುತ್ತಮುತ್ತಲಿನ ಗ್ರಾಮಗಳ ರೈತರ ಸಹಕಾರ ಮತ್ತು ಎಲ್ಲ ನಿರ್ದೇಶಕರ ಸಹಕಾರದಿಂದ ಇವತ್ತು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದೇನೆ. ನಮ್ಮ ಸಂಘದ ರೈತರ ಅಭಿವೃದ್ಧಿಗೆ, ಬಡ್ಡಿ ರಹಿತ ಸಾಲವನ್ನು ನೀಡಲು ಕ್ರಮವಹಿಸುತ್ತೇನೆ. ಅಲ್ಲದೆ ಸಾಲ ಮರುಪಾವತಿ ಮಾಡಿಕೊಂಡು ಸಂಘದ ಆರ್ಥಿಕತೆ ಹೆಚ್ಚಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಗೋದಾಮು ತೆರೆದು, ವಾಣಿಜ್ಯ ಚಟುವಟಿಕೆಗಳಿಗೆ ಅವಕಾಶ ಮಾಡಿಕೊಟ್ಟು, ಅದರಿಂದ ಬರುವ ಹಣದಿಂದ ಸಂಘವನ್ನು ಆರ್ಥಿಕವಾಗಿ ಸದೃಢವಾಗಿ ಮಾಡುವ ಆಸೆ, ಗುರಿ ಹೊಂದಿದ್ದೇನೆ ಎಂದು ಹೇಳಿದರು.

### ಮುಂಬರುವ ಚುನಾವಣೆಗೆ ದಿಕ್ಸೂಚಿ

**"ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಗೆಲುವು ಹಾಗೂ ಬಿಜೆಪಿ-ಜೆಡಿಎಸ್ ಮೈತ್ರಿ ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆ ಸೇರಿದಂತೆ ವಿಧಾನಸಭೆ ಚುನಾವಣೆಗೆ ದಿಕ್ಸೂಚಿಯಾಗಲಿದೆ. ಕಾಂಗ್ರೆಸ್ ಮುಖಂಡರು ಯಾರೇ ಏನೇ ಹೇಳಿದರೂ, ಏನೇ ಸವಾಲು ಹಾಕಿದರೂ 2028 ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್ ಮುಖಂಡ ಕೆ.ಎಂ. ಕೃಷ್ಣನಾಯಕ ಗೆದ್ದೇ ಗೆಲ್ಲುತ್ತಾರೆ.**

■ ಪ್ರಕಾಶ್ ಗುಂಡತ್ತೂರು ಜೆಡಿಎಸ್ ಮುಖಂಡರು



ನಿರ್ದೇಶಕ ಗೋಪಾಲಯ್ಯ ಮಾತನಾಡಿ, ರೈತರ ಏಳಿಗೆಗಾಗಿ, ಸಂಘದ ಆರ್ಥಿಕತೆ ಬಲಪಡಿಸಲು ನೂತನ ಅಧ್ಯಕ್ಷರಿಗೆ ಎಲ್ಲಾ ರೀತಿಯಲ್ಲೂ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ನಿರ್ದೇಶಕರಾದ ಗೋಪಾಲಯ್ಯ ನಿಲುವಾಗಿಲು, ನಾಗರಾಜು, ಚೆನ್ನಾನಾಯಕ, ಮಲ್ಲಿಕಾರ್ಜುನ, ನಾಗರಾಜಪ್ಪ, ಕೆಂಪಾಲಮ್ಮ, ಸಣ್ಣನಾಯಕ, ಸಿದ್ದಮ್ಮ, ಸಣ್ಣೆಗೌಡ, ಜೆಡಿಎಸ್ ಮುಖಂಡ ಪ್ರಕಾಶ್ ಗುಂಡತ್ತೂರು, ಗೋಪಾಲಸ್ವಾಮಿ, ರಾಜೇಂದ್ರ, ಬೈರೇಗೌಡ, ಚರಣ್, ನಂಜೇಗೌಡ, ಪುಟ್ಟಸ್ವಾಮಿ ತುಂಬಸೋಗೆ, ಹನುಮಂತನಾಯಕ ನಿಲುವಾಗಿಲು, ರಂಗೇಗೌಡ, ಲಕ್ಕೇಗೌಡರು, ತಿಮ್ಮನಾಯಕ ಹೆಬ್ಬಲಗುಪ್ಪೆ, ಮಹೇಶ್ ಗ್ರಾಮಸ್ಥರು, ಸುತ್ತಮುತ್ತಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರು ಉಪಸ್ಥಿತರಿದ್ದರು.

# ರಕ್ತದಾನ ಮಹಾದಾನ ಎನ್ನುವ ಮಾತು ಕೇವಲ ಮಾತಲ್ಲ ಅದು ಅಕ್ಷರಶಃ ಸತ್ಯ

■ ಉದಯರಶ್ಮಿ ದಿನಪತ್ರಿಕೆ

ಮುದ್ದೇಬಿಹಾಳ: ರಕ್ತದಾನ ಮಹಾದಾನ ಎನ್ನುವ ಮಾತು ಕೇವಲ ಮಾತಲ್ಲ. ಅದು ಅಕ್ಷರಶಃ ಸತ್ಯ ಎಂದು ತಾಲೂಕು ಆರೋಗ್ಯ ಅಧಿಕಾರಿ ಡಾ.ಸತೀಶ ತಿವಾರಿ ಹೇಳಿದರು.

ತಾಲೂಕಿನ ಮುದ್ನಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ, ಹಡಲಗೇರಿಯ ಮಾದರಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಸತಿಯುಕ್ತ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ಶಿಬಿರದ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ ರಕ್ತದಾನ ಶಿಬಿರದಲ್ಲಿ ಅವರು ಮಾತನಾಡಿದರು.

ರಕ್ತವು ನಮ್ಮ ದೇಹದ ಅತ್ಯಂತ ಅಮೂಲ್ಯವಾದ ಭಾಗ. ರಕ್ತವನ್ನು ಯಾವುದೇ ಕಾರ್ಖಾನೆಯಿಂದ ತಯಾರಿಸಲಾಗುವದಿಲ್ಲ. ಅದು ಮನುಷ್ಯನಲ್ಲಿ ಮಾತ್ರ ಉತ್ಪಾದನೆಯಾಗುತ್ತದೆ. ಅಪಘಾತಗಳಲ್ಲಿ ಗಾಯಗೊಂಡವರು, ಶಸ್ತ್ರಚಿಕಿತ್ಸೆಗೊಳಗಾದವರು, ಗರ್ಭಿಣಿಯರು, ಕ್ಯಾನ್ಸರ್ ರೋಗಿಗಳಿಗೆ ರಕ್ತದ ಅವಶ್ಯಕತೆ ಇದ್ದಾಗ ಮತ್ತೊಬ್ಬ ಮನುಷ್ಯನ ದೇಹದಿಂದ ತೆಗೆದ ರಕ್ತವನ್ನು ಹಾಕುವದು ಅನಿವಾರ್ಯ. ಹಾಗಾಗಿ ಪ್ರತಿಯೊಬ್ಬರೂ ಆರೋಗ್ಯವಾಗಿರುವಾಗ ನಿಯಮಿತವಾಗಿ ರಕ್ತದಾನ ಮಾಡುವ ಅಭ್ಯಾಸ ಬೆಳೆಸಿಕೊಳ್ಳಬೇಕು. ಇದು ಸಮಾಜದ ಜವಾಬ್ದಾರಿಯೂ ಹೌದು. ಒಬ್ಬ ವ್ಯಕ್ತಿ ಕೊಡುವ ಕೇವಲ 350 ಮಿಲಿ ರಕ್ತದಿಂದ 2–3 ಜನರ ಜೀವ ಉಳಿಯಲು ಸಹಾಯವಾಗುತ್ತದೆ ಎಂದರು.



ನ್ಯಾಯವಾದಿ ಚೇತನ ಶಿವಶಿಂಪಿ ಮಾತನಾಡಿ, ಹಲವರು ರಕ್ತದಾನ ಮಾಡುವುದರಿಂದ ದೇಹ ದುರ್ಬಲವಾಗುತ್ತದೆ ಎಂದು ಭಯಪಡುತ್ತಾರೆ. ಆದರೆ ಇದು ತಪ್ಪು ಕಲ್ಪನೆ. ರಕ್ತದಾನ ಸಂಪೂರ್ಣ ಸುರಕ್ಷಿತ ಎಂದು ವೈದ್ಯಕೀಯವಾಗಿ ಸಾಬೀತಾಗಿದೆ. ನಮ್ಮ ದೇಹ ಕೆಲವೇ ದಿನಗಳಲ್ಲಿ ಕಳೆದುಕೊಂಡ ರಕ್ತವನ್ನು ಪುನಃ ಉತ್ಪಾದಿಸುತ್ತದೆ ಅಲ್ಲದೇ ರಕ್ತದಾನ ಮಾಡುವುದರಿಂದ ನಮಗೂ ಲಾಭಗಳಿವೆ. ಹೊಸ ರಕ್ತಕಣಗಳು ಉತ್ಪತ್ತಿಯಾಗುತ್ತವೆ, ಆರೋಗ್ಯ ಪರಿಶೀಲನೆ ಆಗುತ್ತದೆ ಮತ್ತು ನಮ್ಮ ಮನಸ್ಸಿಗೆ ಅಪಾರವಾದ ಸಂತೋಷ ಸಿಗುತ್ತದೆ. ಮುಖ್ಯವಾಗಿ ಒಂದು ಜೀವ ಉಳಿಸಲು ಕಾರಣರಾಗಿದ್ದೇವೆ ಎಂಬ ಆತ್ಮತೃಪ್ತಿ ಹೊಂದುತ್ತೇವೆ. ಹಾಗಾಗಿ ಪ್ರತಿಯೊಬ್ಬರೂ ಇಂತಹ ಶಿಬಿರಗಳಲ್ಲಿ ರಕ್ತದಾನ ಮಾಡುವ ಅವಕಾಶಗಳನ್ನು ಕಳೆದುಕೊಳ್ಳಬೇಡಿ ಎಂದರು.

ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿ ಪ್ರೊ. ರವಿ ಕಟ್ಟಿಮನಿ ಮಾತನಾಡಿ, ಈ ಕಾರ್ಯಕ್ರಮವು ಜಾತಿ, ಮತ, ಧರ್ಮ, ಲಿಂಗ ಭೇಧವಿಲ್ಲದೇ ಮನುಷ್ಯರನ್ನು ಬೆಸೆಯುವ ಕಾರ್ಯಕ್ರಮ. ಇಂತಹ ಅಮೂಲ್ಯವಾದ ಕಾರ್ಯಕ್ರಮದಲ್ಲಿ ಸುಮಾರು 30 ಜನ ರಕ್ತದಾನ ಮಾಡಿದ್ದು ಖುಷಿ ತಂದಿದೆ. ಈ ಕಾರ್ಯಕ್ರಮದ ಯಶಸ್ವಿಗೆ ಶ್ರಮಿಸಿದ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುವದಾಗಿ ತಿಳಿಸಿದರು.

ಕಾಲೇಜಿನ ಸಹ ಪ್ರಾಧ್ಯಾಪಕಿ ಮಹೇಶ್ವರಿ ಹಿರೇಮಠ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮಾಧಿಕಾರಿ ಚೆನ್ನಮ್ಮ ಚಿಲಮೂರ, ಅತಿಥಿ ಉಪನ್ಯಾಸಕರುಗಳಾದ ವನಿತಾ ಕಲಾದಗಿ, ಮಹಾಂತೇಶ ಹುಣಶ್ಯಾಳ, ವಿನಯ ಗಡೇದ, ಪ್ರದೀಪ ಜಗ್ಗಲ, ಉಮೇಶ ರಾಠೋಡ, ಮಂಜುನಾಥ ಸಕ್ರೆಪ್ಪಗೋಳ, ಆಡಳಿತ ವೈದ್ಯಾಧಿಕಾರಿ ಡಾ.ಸಂಗಮೇಶ ದಶವಂತ, ಶಾಲೆಯ ಮುಖ್ಯಗುರು ಎಸ್.ಎ.ಮೆರೆಖೋರ್, ಸಹ ಶಿಕ್ಷಕಿ ಬಿ.ಎಸ್.ಕಡು, ಎಸ್.ಡಿ.ಎಂ.ಸಿ ಸದಸ್ಯರಾದ ಅಬ್ದುಲ್‌ರಜಾಕ ನದಾಫ್, ವಿಠ್ಠಲ ನ್ಯಾಯನೇಗಲಿ, ಮಹಾಂತೇಶ ಇಟಗಿ, ಆರೋಗ್ಯ ಇಲಾಖೆಯ ಅನುಸೂಯಾ ತೇರದಾಳ, ಭಾಗ್ಯಶ್ರೀ ಬಿರಾದಾರ, ಮಲ್ಲಿಕಾರ್ಜುನ ಉಗಲವಾಟ, ರೇವಣಸಿದ್ದಪ್ಪ ಅಮ್ಮಣ್ಣಿ, ಅನಿಲ ಡಿಗ್ಗಿ, ಯಲ್ಲಪ್ಪ ಚಲವಾದಿ, ಐ.ಸಿ.ಮಾನಕರ, ಚರಲಿಂಗೇಶ ಬಿದರಕುಂದಿ, ಮಂಜುನಾಥ ಹಡಪದ, ಶಾಲಾ ವಿದ್ಯಾರ್ಥಿಗಳು ಸೇರಿದಂತೆ ಹಲವರು ಭಾಗಿಯಾಗಿ ಶಿಬಿರವನ್ನು ಯಶಸ್ವಿಗೊಳಿಸಿದರು.

# ಅಂಬೇಡ್ಕರ್ ಜಯಂತಿ ಅಂಗವಾಗಿ ಭವ್ಯ ಪುಸ್ತಕ ಮೇಳ: ಜಾನಕಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ : ಬಸವ ನಾಡಿನಲ್ಲಿ ನಿಂತು ಅಂಬೇಡ್ಕರ್ ಜಯಂತಿಯನ್ನು ಪುಸ್ತಕ ಮೇಳದ ಮೂಲಕ ಹಮ್ಮಿಕೊಂಡಿರುವುದು ದೇಶಕ್ಕೆ ಗುಣಾತ್ಮಕ ಸಂದೇಶ ನೀಡುತ್ತಿದೆ ಎಂದು ಬೆಳಗಾವಿಯ ಪ್ರಾದೇಶಿಕ ಆಯುಕ್ತರಾದ ಕೆ ಎಂ ಜಾನಕಿ ಅವರು ಹೇಳಿದರು.

ಅವರು ವಿಜಯಪುರ ನಗರದ ದರಾಬಾರ್ ಪ್ರೌಢ ಶಾಲೆ ಮೈದಾನದಲ್ಲಿ ಮೇ ಸಾಹಿತ್ಯ ಮೇಳ ವಿಜಯಪುರ ಬಳಗ ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಆಶ್ರಯದಲ್ಲಿ ಏಪ್ರಿಲ್ 10ರಿಂದ 14ರ ವರೆಗೆ 5ದಿನಗಳ ಕಾಲ ಹಮ್ಮಿಕೊಂಡಿರುವ ಬಿಜಾಪುರ ಬುದ್ಧ, ಬಸವ, ಬಾಬಾಸಾಹೇಬ ಅಂಬೇಡ್ಕರ್ ಪುಸ್ತಕ ಮೇಳದ ಉದ್ಘಾಟನೆ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸರ್ವ ಜನಾಂಗದ ಶಾಂತಿಯ ತೋಟ ಆಗಬೇಕಾದರೆ ಸರ್ವರೂ ಸಾಮಾಜಿಕ ಬದ್ಧತೆ ಅಳವಡಿಸಿಕೊಳ್ಳಬೇಕು ಎಲ್ಲರು ಇಂತಹ ಪುಸ್ತಕ ಮೇಳದಲ್ಲಿ ಭಾಗವಹಿಸುವ ಮೂಲಕ ಎಲ್ಲರು ತಮ್ಮ ಜ್ಞಾನದ ಬಲವನ್ನು ಹೆಚ್ಚಿಸಿಕೊಳ್ಳಬೇಕು ಎಂದು ಹೇಳಿದರು.

ಪುಸ್ತಕ ಮೇಳದ ದಿಕ್ಸೂಚಿ ಭಾಷಣ ಮಾಡಿ ಮುಂಬೈನ ದಲಿತ ಪ್ಯಾಂಥ ರ್ಸ್ ಸಂಸ್ಥಾಪಕ ಜೆ ವಿ ಪವಾರ ಅವರು ಮಾತನಾಡಿ ಬುದ್ಧ, ಬಸವ ಬಾಬಾಸಾಹೇಬ ಪುಸ್ತಕ ಮೇಳವು ಇಂದಿನ ಅಂಬೇಡ್ಕರ್ ಜಯಂತಿ ಸಂದರ್ಭದಲ್ಲಿ ಹಮ್ಮಿಕೊಂಡಿರುವುದು ಒಂದು ಐತಿಹಾಸಿಕ ಸಂಗತಿಯಾಗಿದೆ

ಅಂಬೇಡ್ಕರ್ ಅವರು ಪುಸ್ತಕಗಳ ಒಡನಾಟಿಯಾಗಿದ್ದರು ಅವರು ತಮ್ಮ ಇಡಿ ಜೀವನವನ್ನು ಪುಸ್ತಕಗಳೊಂದಿಗೆ ಕಳೆದಿದ್ದಾರೆ ಅಂತಹ ಮಹಾನ್ ವ್ಯಕ್ತಿ ಜಯಂತಿ ಮತ್ತು ಜ್ಯೋತಿಬಾ ಫುಲೆ ಅವರ 200ನೇ ಜಯಂತಿ ಸಂದರ್ಭದಲ್ಲಿ ಅರ್ಥಪೂರ್ಣ ಕಾರ್ಯಕ್ರಮ ಹಮ್ಮಿಕೊಂಡಿರುವುದು ಪ್ರಸ್ತುತ ಸಂದರ್ಭದಲ್ಲಿ ಅತ್ಯಂತ ಸೂಕ್ತವಾಗಿದೆ ಎಂದು ಹೇಳಿದ ಅವರು ಬಾಬಾಸಾಹೇಬರ ಪತ್ನಿ ರಾಮಬಾಯಿ ಅವರ ಜೀವನ ಅವರ ಸಾಮಾಜಿಕ ಕೊಡುಗೆ ಬಗ್ಗೆ ಅಧ್ಯಯನ ಮಾಡುವುದು ಅವಶ್ಯಕತೆ ಇದೆ ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟನೆ ಮಾಡಿ ಡಿ ಎಸ್ ಎಸ್ ನ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ ಅವರು ಮಾತನಾಡಿ ಪುಸ್ತಕಗಳನ್ನು ಜನರ ಬಳಿಗೆ ಹೋಗಬೇಕು ಜನರಿಗೆ ಕೊಳ್ಳುವ ಶಕ್ತಿ ಬರಬೇಕು ಎಂಬ ದೃಷ್ಟಿಕೋನದಲ್ಲಿ ಬುದ್ಧ, ಬಸವ ಬಾಬಾಸಾಹೇಬರ ಪುಸ್ತಕ ಮೇಳವನ್ನು ಬಸವರಾಜ ಸೂಳಿಬಾವಿ ಅವರ ನೇತೃತ್ವದಲ್ಲಿ ಹಮ್ಮಿಕೊಂಡಿರುವುದು ಸಾಂದರ್ಭಿಕ ಸೂಕ್ತವಾಗಿದೆ ಎಂದು ಹೇಳಿದ ಅವರು

ಬಾಬಾಸಾಹೇಬರ ಜನ್ಮದಿನದ ಸಂದರ್ಭದಲ್ಲಿ ಪುಸ್ತಕ ಮೇಳವನ್ನು ಹಮ್ಮಿಕೊಂಡಿರುವುದು ದೇಶಕ್ಕೆ ವೈಚಾರಿಕತೆಯ ಸಂದೇಶ ಕೊಡುತ್ತಿದೆ ಎಂದು ಹೇಳಿದ ಅವರು ಅಂಬೇಡ್ಕರ್ ಅವರ ಜೀವನ ಪುಸ್ತಕಗಳಿಂದ ರುಪುಗೊಂಡಿದೆ, ಇತಿಹಾಸದಲ್ಲಿ ಪ್ರಭುತ್ವಕ್ಕೆ ಪುಸ್ತಕಗಳ ಭಯ ಕಾಡುತ್ತಿದೆ. ಅದು ಇವತ್ತಿನ ವಿಷಯವಲ್ಲ ಬಸವಾದಿ ಶರಣರ ಕಾಲದಿಂದಲೂ ಪ್ರಭುತ್ವವು ಪುಸ್ತಕಗಳ ವೈಚಾರಿಕತೆಗೆ ಅಂಜುತ್ತಿದೆ ಎಂದರು.

ಪ್ರಕಾಶಕರ ಸಂಘದ ಪ್ರಧಾನ ಕಾರ್ಯದರ್ಶಿ ಎನ್ ರವಿಕುಮಾರ ಅವರು ಮಾತನಾಡಿ ಅಂಬೇಡ್ಕರ್ ಅವರು ಪ್ರೀತಿಸುವ ಪುಸ್ತಕಗಳ ಮೇಳ ಹಮ್ಮಿಕೊಳ್ಳುವ ಮೂಲಕ ಅವರ ಜಯಂತಿಯನ್ನು ಅರ್ಥಪೂರ್ಣವಾಗಿ ಆಯೋಜನೆ ಮಾಡಿರುವುದು ಅಭಿನಂದನಾರ್ಹವಾದುದು ಎಂದು ಹೇಳಿದ ಅವರು ಸಾರ್ವಜನಿಕ ಗ್ರಂಥಾಲಯ ಇಲಾಖೆ ಲೇಖಕರ ಮತ್ತು ಪ್ರಕಾಶಕರ ಪುಸ್ತಕ ಖರೀದಿಸಲು ಹಿಂದೇಟು ಹಾಕುತ್ತಿದೆ. ಇದರಿಂದ ಲೇಖಕರು ಮತ್ತು ಪ್ರಕಾಶರಿಗೆ ತೀವ್ರ ತೊಂದರೆ ಉಂಟಾಗುತ್ತಿದೆ ಕೂಡಲೇ ಸರಕಾರ ಪುಸ್ತಕ ಖರೀದಿ ಮಾಡಲು ಮುಂದಾಗಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅನಿಲ ಹೊಸಮನಿ ಅವರು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಡಾ ಅರುಣಕುಮಾರ ಇಂಗಳೆ, ಹಾಸಿಂಪೀರ ವಾಲಿಕಾರ, ಆರತಿ ಶಹಾಪುರ, ಸುಭಾಸ ಬೆಳ್ಳುಳ್ಳಿ, ಶ್ರೀನಿವಾಸ ಜಾಲವಾದಿ ಹೇಮಂತ ಭೂತನಾಳ, ಸುರೇಶ ಗೆಜ್ಜಿ, ಹೇಮಂತ ಭೂತನಾಳ, ಸಿದ್ದರಾಮ ಉಪ್ಪಿನ ಅಡಿವೆಪ್ಪ ಸಾಲಗಲ್ಲ ಬಸವರಾಜ ಸೂಳಿಬಾವಿ ಉಪಸ್ಥಿತರಿದ್ದರು. ಸುರೇಶ ಬಿಜಾಪುರ ನಿರೂಪಿಸಿದರು, ಸಂಜು ಕಂಬಾಗಿ ವಂದಿಸಿದರು.

## ಬಿ.ಎಲ್.ಡಿ.ಇ ಚಿಕಿತ್ಸೆ ಶಿಬಿರ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎ.ವಿ.ಎಸ್ ಆಯುರ್ವೇದ ಮಹಾವಿದ್ಯಾಲಯ, ಆಸ್ಪತ್ರೆಯ ಕೌಮಾರಭೃತ್ಯ ವಿಭಾಗದ ವತಿಯಿಂದ ಮಕ್ಕಳಲ್ಲಿ ಕಂಡುಬರುವ ಚಂಚಲತೆ ಹಾಗೂ ಅತೀ ಚಟುವಟಿಕೆ (ಂಆಊಆ) ಕುರಿತು ಉಚಿತ ತಪಾಸಣೆ, ಪಂಚಕರ್ಮ ಚಿಕಿತ್ಸೆ ಮತ್ತು ಔಷಧ ವಿತರಣೆ ಸೌಲಭ್ಯ ಹಾಗೂ ಮಕ್ಕಳಲ್ಲಿ ಕಾಣಿಸುವ ಚರ್ಮರೋಗಗಳಿಗೆ ಉಚಿತ ತಪಾಸಣೆ ಹಾಗೂ ಚಿಕಿತ್ಸೆ ಶಿಬಿರ ಏಪ್ರಿಲ್ 15 ರಿಂದ ಏಪ್ರಿಲ್ 18ರ ವರೆಗೆ ನಡೆಯಲಿದೆ. ಬುಧವಾರದಿಂದ ಶನಿವಾರದ ವರೆಗೆ 4 ದಿನ ಈ ಶಿಬಿರ ಆಯೋಜಿಸಲಾಗಿದೆ. ಒಂದೇ ಜಾಗದಲ್ಲಿ ಶಾಂತವಾಗಿ ಕುಳಿತುಕೊಳ್ಳಲು ಆಗದಿರುವುದು, ದಿನನಿತ್ಯದ ಕೆಲಸಗಳಲ್ಲಿ ಏಕಾಗ್ರತೆ ಕೊರತೆ ಇತ್ಯಾದಿ ಸಮಸ್ಯೆಗಳನ್ನು ಎದುರಿಸುತ್ತಿರುವ ಮಕ್ಕಳ ಪೋಷಕರು ಈ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು ಎಂದುರು.

# ಜ್ಯೋತಿಬಾ ಫುಲೆ ಜಯಂತಿ: ಶಿಕ್ಷಕ ದಂಪತಿಗಳಿಂದ ಜಾಥಾ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ : ವಿಜಯಪುರ ನಗರದ ದರಾಬಾರ್ ಪ್ರೌಢ ಶಾಲೆ ಮೈದಾನದಲ್ಲಿ ಮೇ ಸಾಹಿತ್ಯ ಮೇಳ ವಿಜಯಪುರ ಬಳಗ ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಆಶ್ರಯದಲ್ಲಿ ಏಪ್ರಿಲ್ 10ರಿಂದ 14ರ ವರೆಗೆ 5ದಿನಗಳ ಕಾಲ ಹಮ್ಮಿಕೊಂಡಿರುವ ಬಿಜಾಪುರ ಬುದ್ಧ, ಬಸವ, ಬಾಬಾಸಾಹೇಬ ಅಂಬೇಡ್ಕರ್ ಪುಸ್ತಕ ಮೇಳದಲ್ಲಿ ಎರಡನೇ ದಿನ ಮಹಾತ್ಮಾ ಜ್ಯೋತಿಬಾ ಫುಲೆ ಜಯಂತಿ ಅಂಗವಾಗಿ ನಗರದ ಸಾವಿತ್ರಿಬಾಯಿ ಫುಲೆ ಮಾರ್ಗದಿಂದ ಪುಸ್ತಕ ಮೇಳದ ಸ್ಥಳದ ವರೆಗೆ ಶಿಕ್ಷಕ ದಂಪತಿಗಳ ಜಾಥಾ ಜರುಗಿತು.

ಶಿಕ್ಷಕ ದಂಪತಿಗಳ ಜಾಥಾಕ್ಕೆ ಎಸ್ ಸಿ ಎಸ್ ಟಿ ನೌಕರರ ಸಮನ್ವಯ ಸಮಿತಿ ಅಧ್ಯಕ್ಷ ಬಿ ಎಚ್ ನಾಡಗಿರಿ, ಪ್ರಧಾನ ಕಾರ್ಯದರ್ಶಿ ಸೂರ್ಯಕಾಂತ ಹೊಸಮನಿ, ಹೊನಮಲ್ಲಗೌಡ ಸಾರವಾಡ, ಎಸ್ ಎಂ ಡೋಣಿ, ಆಶಾ ಕಟ್ಟಿಮನಿ, ನೀಲಾಂಬಿಕಾ ಬಿರಾದಾರ, ರಶ್ಮಿ ಗುಣಕಿ ವಿಜಯಶ್ರೀ ಬಿಜಾಪುರ, ಹಣಮಂತ ಮಮದಾಪುರ, ಸಲೀಂ ಕಲಾದಗಿ ಚಾಲನೆ ನೀಡಿದರು.

ಜಾಥಾದಲ್ಲಿ ಬುದ್ಧ ಬಸವ, ಬಾಬಾಸಾಹೇಬ ಅಂಬೇಡ್ಕರ್ ಮತ್ತು ದೇಶದ ಮೊದಲ ಶಿಕ್ಷಕ ದಂಪತಿಗಳಾದ ಸಾವಿತ್ರಿಬಾಯಿ ಫುಲೆ ಮತ್ತು ಜ್ಯೋತಿಬಾ ಫುಲೆ ದಂಪತಿಗಳಿಗೆ ಜಯಘೋಷ ಮೊಳಗಿದವು.

ಶಿಕ್ಷಕ ದಂಪತಿಗಳ ಜಾಥಾದಲ್ಲಿ ದ್ರೌಪತಿ ನಾಗರಾಜ ಹೊನಸೂರೆ, ಶೋಭಾ ಮಲ್ಲಿಕಾರ್ಜುನ ಕನ್ನೂರ, ಸಾವಿತ್ರಿ ದೇವರಾಜ ಶೃಂಗೇರಿ, ಸಾವಿತ್ರಿ ಗಣಪತಿ ಚವ್ಹಾಣ, ರೇಣುಕಾ ಶಿವಪ್ಪ ಚಲವಾದಿ, ಜಯಶ್ರೀ ಸಿದ್ರಾಮಪ್ಪ ತದ್ದೇವಾಡಿ, ನೇತ್ರಾವತಿ ವಿಶ್ವನಾಥ ಮೇತ್ರಿ, ಶಿಲ್ಪಶ್ರೀ ನಿಜು ಮೇಲಿನಕೇರಿ, ವೈಶಾಲಿ ವಿಜಯಾನಂದ ಮುದ್ದೇಬಿಹಾಳ, ವಿಜಯಲಕ್ಷ್ಮಿ ಜಗದೀಶ ಹುಲ್ಯಾಳ, ಎಲ್ ಟಿ ಕೊಣ್ಣೂರ ಎಸ್ ಎ ಬಿರಾದಾರ, ಎಸ್ ಎಸ್ ಕುಲಕರ್ಣಿ ಕೆ ಎಚ್ ಪೂಜಾರಿ ಶಿಕ್ಷಕ ದಂಪತಿಗಳು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಬಸವರಾಜ ಸೂಳಿಬಾವಿ, ಅನಿಲ ಹೊಸಮನಿ, ಸುರೇಶ ಘೊಣಸಗಿ, ಚೆನ್ನು ಕಟ್ಟಿಮನಿ, ಸುರೇಶ ಬಿಜಾಪುರ, ವೈ ಎಸ್ ಗುಣಕಿ, ವೈ ಎಚ್ ಲಂಬು ದೊಡ್ಡಣ್ಣ ಭಜಂತ್ರಿ, ಅನಿಲ ಇಕ್ಕಡೆ , ಚಂದ್ರಶೇಖರ ಹೊಸಮನಿ, ಲಾಯಪ್ಪ ಇಂಗಳೆ, ಕಲ್ಲಪ್ಪ ಶಿವಶರಣ, ಗುರುರಾಜ ಹಂದ್ರಾಳ, ಶರಣು ಕಿರಣಗಿ, ಸಂಘರ್ಷ ಹೊಸಮನಿ, ಸೇರಿ ನೂರಾರು ಜನ ಉಪಸ್ಥಿತರಿದ್ದರು.

# ಭೂಸುರಕ್ಷಾ ಯೋಜನೆ ಯಶಸ್ಸಿಗೆ ಕೈ ಜೋಡಿಸಬೇಕು ಜಾನಕಿ ಸೂಚನೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಬೇಸಿಗೆಯಲ್ಲಿ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಇಲ್ಲ. ಆದಾಗ್ಯೂ ಜಿಲ್ಲಾಡಳಿತ ಜಿಲ್ಲೆಯಲ್ಲಿ ಉಲ್ಬಣಿಸಬಹುದಾದ ತಾಲೂಕುಗಳಲ್ಲಿ ಪರ್ಯಾಯ ಜಲಮೂಲಗಳ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಬೆಳಗಾವಿ ಪ್ರಾದೇಶಿಕ ಆಯುಕ್ತರಾದ ಜಾನಕಿ ಜಿಲ್ಲಾಡಳಿತಕ್ಕೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಬೇಸಿಗೆಯಲ್ಲಿ ಕುಡಿಯುವ ನೀರು ನಿರ್ವಹಣೆ ಹಾಗೂ ಭೂಸುರಕ್ಷಾ ಯೋಜನೆಯಡಿ ಬಾಕಿಯಿರುವ ಪ್ರಕರಣಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.ಬೇಸಿಗೆಯಲ್ಲಿ ಜನತೆಯ ಜನ ಜಾನುವಾರುಗಳ ಹಿತದೃಷ್ಟಿಯಿಂದ ಜಿಲ್ಲೆಯ ಕೆರೆಗಳಿಗೆ ಆಲಮಟ್ಟಿ ಜಲಾಶಯದಿಂದ ನೀರು ತುಂಬಿಸಬೇಕು ಎಂದು ರೈತರು ಒತ್ತಾಯಿಸಿದ್ದನ್ನು ಗಂಭೀರವಾಗಿ ಪರಿಗಣಿಸಿದ ಕೃಷ್ಣಾ ಭಾಗ್ಯ ಜಲನಿಗಮದ ಅಣೆಕಟ್ಟು ವೃತ್ತದ ಅಧಿಕಾರಿಗಳು ತಾಂತ್ರಿಕ ವರದಿ ಸಲ್ಲಿಸಿದ್ದರು. ಆ ವರದಿಯನುಸಾರ ಜಲಾಶಯದಲ್ಲಿ ಬಾಕಿ ಉಳಿದಿರುವ 4.231 ಟಿಎಂಸಿ ನೀರಿಬ ಪೈಕಿ 2.30 ಟಿಎಂಸಿ ಇನೀರನ್ನು ಏ. 10 ರಿಂದ ಏ. 30ರವರೆಗೆ ಆಲಮಟ್ಟಿ ಜಲಾಶಯದಿಂದ ಕೃಷ್ಣಾ ಭಾಗ್ಯ ಜಲನಿಗಮದ ಕಾಲುವೆಗಳ ಮೂಲಕ ಜಲಸಂಗ್ರಹಾಲಯ ಜಾಲಗಳಿಗೆ ಹರಿಸಲಾಗುವುದು ಎಂದು ಆಯುಕ್ತರು ತಿಳಿಸಿದರು.

ಆದರೆ ಕಾಲುವೆ ಜಾಲಕ್ಕೆ ಹರಿಸಲಾಗುವ ಈ ನೀರನ್ನು ಕೇವಲ ಕುಡಿಯುವ ನೀರಿನ ಉದ್ದೇಶಕ್ಕೆ ಮಾತ್ರವೇ ಬಳಸಬೇಕು. ಬದಲಿಗೆ ಅನ್ಯ ಉದ್ದೇಶಕ್ಕೆ ಬಳಕೆಸುವಂತಿಲ್ಲ. ಈ ನಿಟ್ಟಿನಲ್ಲಿ ಜಿಲ್ಲಜಿಲ್ಲಾಧಿಕಾರಿಗಳು ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಕಣ್ಗಾವಲಿಡಬೇಕು ಎಂದು ಪ್ರಾದೇಶಿಕ ಆಯುಕ್ತರಾದ ಜಾನಕಿ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜಲಧಾರೆ ಯೋಜನೆ ಪೂರ್ಣಗೊಳಿಸಿ: ಬೇಸಿಗೆಯಲ್ಲಿ ಜಿಲ್ಲೆಯಲ್ಲಿ ತಲೆದೋರಬಹುದಾದ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಲಿರುವ ಮಹತ್ವಾಕಾಂಕ್ಷಿಯ ಜಲಧಾರೆ ಯೋಜನೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಜಿಲ್ಲಾಧಿಕಾರಿಗಳು ವಿಶೇಷ ಆಸಕ್ತಿ ತೆಗೆದುಕೊಂಡು, ಅಧಿಕಾರಿಗಳಿಗೆ ಚುರುಕು ಮುಟ್ಟಿಸಬೇಕು ಎಂದು ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ಈ ಯೋಜನೆ ಅನುಷ್ಠಾನಕ್ಕೆ ಎದುರಾಗಿರುವ ತಾಂತ್ರಿಕ ಮತ್ತಿತರೆ ಸಮಸ್ಯೆಗಳನ್ನು ಇತ್ಯರ್ಥಗೊಳಿಸಿ, ಯುದ್ಧೋಪಾದಿಯಲ್ಲಿ ಯೋಜನೆ ಅನುಷ್ಠಾನಗೊಳಿಸಬೇಕು. ಈ ವಿಷಯವನ್ನು ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಬೇಕು ಎಂದರು.

ಭೂಸುರಕ್ಷಾ ಯೋಜನೆಗೆ ಕೈಜೋಡಿಸಿ: ಭೂದಾಖಲೆಗಳನ್ನು ಡಿಜಿಟಲೀಕರಣಗೊಳಿಸಿ ರಕ್ಷಿಸುವ ಹಾಗೂ ನಾಗರಿಕರಿಗೆ ಸುಲಭವಾಗಿ ಲಭ್ಯಗೊಳಿಸುವ ಸರ್ಕಾರದ ಮಹತ್ವಾಕಾಂಕ್ಷಿ ಭೂಸುರಕ್ಷಾ ಯೋಜನೆಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ಕೈ ಜೋಡಿಸಬೇಕು ಎಂದು ಆಯುಕ್ತರಾದ ಜಾನಕಿ ಹೇಳಿದರು.

ಎಲ್ಲ ಹಳೆಯ ಭೂ ದಾಖಲೆಗಳನ್ನು ತ್ವರಿತಗತಿಯಲ್ಲಿ ಡಿಜಿಟಲೀಕರಣಗೊಳಿಸಬೇಕು. ತನ್ಮೂಲಕ ಭೂ ದಾಖಲೆಗಳನ್ನು ರೈತರಿಗೆ ತ್ವರಿತವಾಗಿ ನೀಡುವನಿ ಟ್ಟಿನಲ್ಲಿ ಅಧಿಕಾರಿಗಳು ವಿಶೇಷ ಮುತುವರ್ಜಿ ವಹಿಸಬೇಕು ಎಂದರು. ಈ ನಿಟ್ಟಿನಲ್ಲಿ ರೈತರು ಹಾಗೂ ಸಾರ್ವಜನಿಕರು ಭೂ ದಾಖಲೆ ಕಚೇರಿಗೆ ಅಲೆದಾಡುವುದರ ಬದಲಿಗೆ ಆನ್‌ಲೈನ್ ಮೂಲಕ ಮಾಹಿತಿ ಹಾಗೂ ದಾಖಲೆಗಳನ್ನು ಪಡೆಯಲು ಅಧಿಕಾರಿಗಳು ಸಾರ್ವಜನಿಕರಲ್ಲಿ ಜಿಲ್ಲಾ, ತಾಲೂಕು, ಹೋಬಳಿ ಹಾಗೂ ಗ್ರಾಮ ಮಟ್ಟದಲ್ಲಿ ಜಾಗೃತಿ ಮೂಡಿಸಬೇಕು ಎಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಡಾ. ಔದ್ರಾಮ, ವಿಜಯಪುರ ಉಪವಿಭಾಗಾಧಿಕಾರಿ ಗುರುನಾಥ ದಡ್ಡೆ, ಇಂಡಿ ಉಪವಿಭಾಗಾಧಿಕಾರಿ ಚಿದಾನಂದ ಗುರುಸ್ವಾಮಿ, ಜಿಲ್ಲೆಯ ಎಲ್ಲ ತಾಲೂಕಿನ ತಹಶೀಲ್ದಾರ್‌ರು, ಆಲಮಟ್ಟಿ ಅಣೆಕಟ್ಟು ವೃತ್ತದ ಕೆಬಿಜೆ-ಎನ್ ಎಲ್ ಅಧಿಕಾರಿಗಳು ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಇದ್ದರು.

# ಸಿಕ್ಯಾಬ್ ಮಹಿಳಾ ಪದವಿ ಪರ್ವ ಕಾಲೇಜು ಫಲಿತಾಂಶ 100 ಕ್ಕೆ 99.1%

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ : ಪಿ ಯು ಸಿ ಪರೀಕ್ಷೆಯ ಫಲಿತಾಂಶ ಗುರುವಾರ ಪ್ರಕಟವಾಗಿದ್ದು, ಸಿಕ್ಯಾಬ್ ಮಹಿಳಾ ಪದವಿ ಪರ್ವ ಕಾಲೇಜಿನ ವಿದ್ಯರ್ಥಿನಿಯರು ಉತ್ತಮ ಫಲಿತಾಂಶ ತಂದು ಕಾಲೇಜಿಗೆ ಕರ್ತಿ ತಂದಿದ್ದಾರೆ.

ನಗರದ ಸಿಕ್ಯಾಬ್ ಮಹಿಳಾ ಪದವಿ ಪರ್ವ ಕಾಲೇಜಿನ 2026 ನೇ ಸಾಲಿನ ದ್ವಿತೀಯ ಪಿಯುಸಿ ವರ್ಷಿಕ ಪರೀಕ್ಷೆಯಲ್ಲಿ ಸ್ಥಳೀಯ ಸಿಕ್ಯಾಬ್ ಮಹಿಳಾ ಪದವಿ ಪರ್ವ ಕಾಲೇಜಿನ ಫಲಿತಾಂಶವು 100 ಕ್ಕೆ 99.1% ಪಡೆದುಕೊಂಡಿದ್ದು. ಕಲಾ ವಿಭಾಗದಲ್ಲಿ 32 ವಾಣಿಜ್ಯ ಶಾಸ್ತ್ರ –22 ವಿಜ್ಞಾನ ವಿಭಾಗದಲ್ಲಿ 57 ಒಟ್ಟು 111 ವಿದ್ಯರ್ಥಿನಿಯರು ಪರೀಕ್ಷೆಗೆ ಹಾಜರಾಗಿದ್ದು ಸ್ಟೇಟ್ ಡಿಸ್ಟಿಕ್ಷನ್ (38) ಪ್ರಥಮ ರ್ದ್ಜಯಲ್ಲಿ (60) ದ್ವಿತೀಯ ರ್ದ್ಜಯಲ್ಲಿ (07) ಹೀಗೆ ಮೂರು ವಿಭಾಗಗಳಲ್ಲಿ 99.1% ಫಲಿತಾಂಶವಾಗಿದೆ.

ಕಾಲೇಜಿಗೆ ಪ್ರಥಮ ಅತಿಫಾ ನಾಜರೀನ್ ಪಟ್ಟೇದ 96.83% 581/600 ದ್ವಿತೀಯ ಚೇತನಾ ಬಗಲಿ 95.33% 572/600, ಮೇಘಾ ಹಿರೇಮಠ 95.33% 572/600 ತೃತೀಯ ಫಹಮ್‌ಜೀಯಾ ರ್ಜಗಿ 94.83% 569/600 , ಸ್ವಾಲಿಯಾ ಶೇಖ 94.83% 569/600 ಸ್ಥಾನ ಪಡೆದಿದ್ದು. ವಿಜ್ಞಾನ ವಿಭಾಗದಲ್ಲಿ ಪ್ರಥಮ ಅತಿಫಾ ನಾಜರೀನ್ ಪಟ್ಟೇದ 96.83 581/600 ದ್ವಿತೀಯ ಫಹಮ್‌ಜೀಯಾ ರ್ಜಗಿ 94.83 569/600 ಸ್ವಾಲಿಯಾ ಶೇಖ 94.83 569/600 ತೃತೀಯ ತಸ್ಮಿಯಾ ಇನಾಮಾದಾರ 93.66 562/600 ವಾಣಿಜ್ಯ ಶಾಸ್ತ್ರ ವಿಭಾಗದಲ್ಲಿ ಪ್ರಥಮ ಮೇಘಾ ಹಿರೇಮಠ 95.33% 572/600 ದ್ವಿತೀಯ ಅಂಕಿತಾ ಬಬಲೇಶ್ವರ 94% 564/600 ತೃತೀಯ ಮುಬಸ್ಸಿರೀನ್ ತಹಶೀಲ್ದಾರ 92% 562/ 600 ಕಲಾ ವಿಭಾಗದಲ್ಲಿ ಪ್ರಥಮ ಚೇತನಾ ಬಗಲಿ 95.33% 572/600 ದ್ವಿತೀಯ ಸಾವಿತ್ರಿ ಪಾಟೀಲ 93.33% 560/600 ತೃತೀಯ ಸೌಮ್ಯ ಕಮತಗಿ 93.16% 559/600 ಹೀಗೆ ಸ್ಥಾನವನ್ನು ಪಡೆದುಕೊಂಡಿದ್ದಾರೆ. ವಿಷಯವಾರು ನೂರು ಅಂಕಗಳನ್ನುಗಳಿಸಿದ ವಿದ್ಯರ್ಥಿನಿಯರು ಗಣಿತಶಾಸ್ತ್ರದಲ್ಲಿ – ಫರಹತ್ ಔರಸಂಗ – ಸಂಖ್ಯಾಶಾಸ್ತ್ರ ಮೇಘಾ ಹಿರೇಮಠ, ಇತಿಹಾಸ – ಚೇತನಾ ಬಗಲಿ, ಸೌಮ್ಯ ಕಮತಗಿ, ಶಿಕ್ಷಣ ಶಾಸ್ತ್ರ – ಮದಿಯಾ ಬಾಂಗಿ ಅರೇಬಿಕ್ – ಮದಿಯಾ ಬಾಂಗಿ, ಹುದಾ ಇನಾಮದಾರ ಹೀಗೆ ಅಂಕಗಳನ್ನು ಗಳಿಸಿ ಕಾಲೇಜಿಗೆ ಕರ್ತಿ ತಂದಿದಕ್ಕಾಗಿ ಸಿಕ್ಯಾಬ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಸಲಾವುದ್ದೀನ್ ಅಯೂಬಿ ಎಸ್ ಪುಣೇಕರ ಪ್ರಧಾನ ಕರ್ಯರ್ಶಿಗಳಾದ ಶ್ರೀ ಎ ಎಸ್ ಪಾಟೀಲ, ನರ್ದೇಶಕರಾದ ಡಾ. ಜಿಯಾ ಅಬೇದಿನ್ ಎಸ್ ಪುಣೇಕರ, ಕಾಲೇಜಿನ ಡೀನ್ ಶ್ರೀ ಎನ್ ಎಸ್ ಭೂಸನೂರ ಪ್ರಾಚರ್ಯರಾದ ಶ್ರೀ ಎಂ ಎಂ ಗುರಡಿ, ಕಾಲೇಜಿನ ಸಹ ಸಿಬ್ಬಂದಿ ರ್ಗದವರು ರ್ಷ ವ್ಯಕ್ತಪಡಿಸಿದ್ದಾರೆ.

# ಸಾಹಿತ್ಯ ಮೇಳದಲ್ಲಿ ಸಮಾನತೆ ಮತ್ತು ಮಾನವೀಯತೆ ಸಂದೇಶ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ :ಎಲ್ಲರಿಗೂ ಬಂಡಾಯದ ಹಕ್ಕು ಇದ್ದರು ಕೂಡಾ ಬಂಡಾಯ ಏಳುವ ಅನಿವಾರ್ಯತೆ ದಲಿತರಿಗೆ ಮಾತ್ರ ಇದೆ ಅಂತಹ ವಾತಾವರಣ ದೇಶದಲ್ಲಿ ಇನ್ನು ಜೀವಂತವಾಗಿದೆ ಎಂದು ಅಸ್ಪೃಶ್ಯತೆ ಆಚರಣೆ ಸಮಾಜಕ್ಕೆ ಮಾರಕವಾಗಿದೆ ಎಂದು ಎಂದು ಪ್ರೊ ಬಸವರಾಜ ಜಾಲವಾದಿ ಹೇಳಿದರು.

ಅವರು ವಿಜಯಪುರ ನಗರದ ದರಾಬಾರ್ ಪ್ರೌಢ ಶಾಲೆ ಮೈದಾನದಲ್ಲಿ ಮೇ ಸಾಹಿತ್ಯ ಮೇಳ ವಿಜಯಪುರ ಬಳಗ ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಆಶ್ರಯದಲ್ಲಿ ಏಪ್ರಿಲ್ 10ರಿಂದ 14ರ ವರೆಗೆ 5ದಿನಗಳ ಕಾಲ ಹಮ್ಮಿಕೊಂಡಿರುವ ಬಿಜಾಪುರ ಬುದ್ಧ, ಬಸವ, ಬಾಬಾಸಾಹೇಬ ಅಂಬೇಡ್ಕರ್ ಪುಸ್ತಕ ಮೇಳದಲ್ಲಿ ಮೊದಲ ದಿನದ ಕವಿಗೋಷ್ಠಿಯ ಆಶಯ ನುಡಿ ಮಾತನಾಡಿದರು.

ಇಂದಿನ ಕವಿಗಳು ಬರೆಯುವುದು ನೋಡಿದರೆ ಸಮಾಜದಲ್ಲಿನ ಅಂಕು ಡೊಂಕು ತಿದ್ದುತ್ತಾರೆ ಎಂಬ ವಿಶ್ವಾಸ ನನಗಿದೆ ಎಂದು ಆಶಯ ವ್ಯಕ್ತಪಡಿಸಿದರು.

ಕವಿಗೋಷ್ಠಿಯ ಅತಿಥಿ ಸ್ಥಾನವನ್ನು ವಹಿಸಿ ಹಿರಿಯ ಸಾಹಿತಿ ಶಂಕರ ಬೈಚಬಾಳ ಅವರು ಮಾತನಾಡಿ ಹಿಂದು ಮುಸ್ಲಿಂ ಕ್ರೈಸ್ತರೆಲ್ಲರಲ್ಲಿ ನಾನು ಮನುಷ್ಯರನ್ನು ಕಾಣುತ್ತೇನೆ ಎಂದು ಕವಿ ರಂಜಾನ್ ದರ್ಗಾ ಅವರು ಹೇಳಿದರೆ ಹಿಂದು, ಮುಸ್ಲಿಂ, ಕ್ರೈಸ್ತರೆಲ್ಲರಿಗೊಂದೆ ಭಾರತ ಮಂದಿರ ಎಂದು ಕವಿ ಶಂಗು ಬಿರಾದಾರ ಹೇಳಿದ್ದಾರೆ ಇಂತಹ ಕವಿಗಳ ಸಂದೇಶವನ್ನು ನಾವು ಮಧ್ಯಪ್ರಾಚ್ಯ ದೇಶಗಳ ಯುದ್ಧವನ್ನು




ನಿಲ್ಲಿಸಲು ಕಳಿಸಬೇಕಿದೆ ಎಂದು ಹೇಳಿದರು.

ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ಹಿರಿಯ ಸಾಹಿತಿ ದೊಡ್ಡಣ್ಣ ಬಜಂತ್ರಿ ಅವರು ಮಾತನಾಡಿ ಪ್ರಾಚೀನ ಕವಿಗಳ ಕಾವ್ಯ ಜೀವಂತವಾಗಿರುವಂತೆ ನಮ್ಮ ಕವಿತೆಗಳು ಜೀವಂತಿಕೆಯಿಂದ ಮುಂದಿನ ದಿನಗಳಲ್ಲಿ ಇರುತ್ತವೆಯೋ ಇಲ್ಲವೋ ಎಂಬ ಅನುಮಾನ ವ್ಯಕ್ತಪಡಿಸಿದ ಅವರು ಸಮ ಸಮಾಜ ನಿರ್ಮಾಣ ಮಾಡುವ ಜವಾಬ್ದಾರಿ ಕವಿಗಳ ಮೇಲಿದೆ ಕವಿತೆ ವಾಸ್ತವ ಸಂಗತಿಗಳ ಮೇಲೆ ಬೆಳಕು ಚೆಲ್ಲಬೇಕು ಎಂದು ಹೇಳಿದರು.

ಕವಿಗೋಷ್ಠಿಯಲ್ಲಿ ಶಿವಪುತ್ರ ಅಜಮನಿ, ಮುರುಗೇಶ ಸಂಗಮ, ಅಮಿರುದ್ದೀನ್ ಖಾಜಿ, ಶೇಷರಾವ ಮಾನೆ, ಎಸ್ ಎಂ ನೆರಬೆಂಚಿ, ವೈ ಎಚ್ ಲಂಬು ಕವನ ವಾಚಿಸಿದರು.

ಎಂ ಬಿ ಕಟ್ಟಿಮನಿ ಸ್ವಾಗತಿಸಿದರು ಸುರೇಶ ಬಿಜಾಪುರ ನಿರೂಪಿಸಿದರು ಸಂಘರ್ಷ ಹೊಸಮನಿ ವಂದಿಸಿದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR